# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜನವರಿ 04, 2025

ಸಂಪುಟ : 51 ಸಂಚಿಕೆ : 232 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಯುವ ಜನೋತ್ಸವ : ಸಾವಿರಾರು ವಿದ್ಯಾರ್ಥಿಗಳ ಬೃಹತ್ ಜಾಥಾ

ದಾವಣಗೆರೆ, ಜ.3 - ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ಜನವರಿ 5 ಮತ್ತು 6 ರಂದು ನಗರದ ಬಾಪೂಜಿ ಎಂಬಿಎ ಮೈದಾನದಲ್ಲಿ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ನಡೆಯಲಿದ್ದು ಇದರ ಅಂಗವಾಗಿ ಶುಕ್ರವಾರ ಗುಂಡಿ ವೃತ್ತದಿಂದ ಸಾವಿರಾರು ಕಾಲೇಜು ವಿದ್ಯಾರ್ಥಿಗಳಿಂದ ಬೃಹತ್ ಜಾಥಾ ಕಾರ್ಯಕ್ರಮ ನಡೆಯಿತು.

ಜಿ.ಪಂ. ಸಿಇಒ ಡಾ.ಸುರೇಶ್ ಬಿ. ಇಟ್ನಾಳ್ ಮೋತಿ ವೀರಪ್ಪ ಕಾಲೇಜು ಮುಂಭಾಗದ ಗುಂಡಿ ವೃತ್ತದಲ್ಲಿ ಜಾಥಾಗೆ ಚಾಲನೆ ನೀಡಿದರು.

ಜಾಥಾದಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು, ವಿವಿಧ ಘೋಷ ವಾಕ್ಯಗಳ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ನೀರನ್ನು ಉಳಿಸಿ ಭೂಮಿಯನ್ನು ರಕ್ಷಿಸಿ, 'ಸ್ವಚ್ಛ ಮತ್ತು ಹಸಿರು ಅದು ನಮ್ಮ ಕನಸು' ಮತ್ತು 'ಉಸಿರಾಡಲು ಪ್ರೀತಿಸಿ, ಮರಗಳನ್ನು ಉಳಿಸಿ' 'ಮಾಲಿನ್ಯವನ್ನು ಅಳಿಸಿ, ಬದುಕಲು ಪ್ರಾರಂಭಿಸಿ'. ವಿದ್ಯಾರ್ಥಿನಿಯರು 'ಹಣದಾಸೆಗೆ ಬಲಿಯಾಗದೆ ಯೋಚಿಸಿ ಮತ ಚಲಾಯಿಸಿ, ಪ್ರಜಾಪ್ರಭುತ್ವ ಗಟ್ಟಿಗೊಳಿಸಿ ಎಂದು ಕೂಗುತ್ತಾ ಸಾಗಿದರು. ಜಾಥಾದಲ್ಲಿ 75 ವರ್ಷದ ಹಿರಿಯ ವ್ಯಕ್ತಿ ನಾಗರಾಜ್ ಭಾಗವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕಾಲ್ನಡಿಗೆ ಜಾಥಾದಲ್ಲಿ ಅತ್ಯುತ್ತಮವಾಗಿ ಸಂಘಟಿಸಿದ ಉತ್ತಮ ತಂಡಕ್ಕೆ ಅಭಿನಂದನಾ ಪತ್ರವನ್ನು ಶಾಸಕ ಬಿ.ಪಿ ಹರೀಶ್ ವಿತರಿಸಿದರು. ಅಪರ ಜಿಲ್ಲಾಧಿಕಾರಿ (2ನೇ ಪುಟಕ್ಕೆ)

# ಆಸ್ತಿ ಸಂವಿಧಾನಿಕ ಹಕ್ಕು

## ಪರಿಹಾರ ನೀಡದೆ ಆಸ್ತಿ ವಶ ಸಲ್ಲ ಎಂದ ಸುಪ್ರೀಂ

ನವದೆಹಲಿ, ಜ. 3- ಆಸ್ತಿಯು ಸಂವಿಧಾನಿಕ ಹಕ್ಕಾಗಿದೆ. ಕಾನೂನಿನ ಪ್ರಕಾರ ಸೂಕ್ತ ಪರಿಹಾರ ನೀಡದೆ ವ್ಯಕ್ತಿಗಳ ಆಸ್ತಿಗಳನ್ನು ವಶಪಡಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಸಂವಿಧಾನಕ್ಕೆ 1978 ರಲ್ಲಿ 44ನೇ ತಿದ್ದುಪಡಿ ತಂದ ನಂತರ ಆಸ್ತಿಯು ಮೂಲಭೂತ ಹಕ್ಕಾಗಿ ಉಳಿದಿಲ್ಲ. ಆದರೆ ಸಂವಿಧಾನದ 300 ಎ ಕಲಂ ಅನ್ವಯ ಆಸ್ತಿಯು ಕಲ್ಯಾಣ ಸರ್ಕಾರದಲ್ಲಿ ಮಾನವ ಹಕ್ಕಾಗಿ ಮುಂದುವರೆದಿದೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಬೆಂಗಳೂರು ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರಾಜೆಕ್ಟ್ ಯೋಜನೆಗೆ ಸಂಬಂಧಿಸಿದಂತೆ ಜಮೀನು ವಶ ಕುರಿತು 2022 ರಲ್ಲಿ ಕರ್ನಾಟಕ ಹೈಕೋರ್ಟ್ ನೀಡಿದ ತೀರ್ಪನ್ನು ಪ್ರಶ್ನಿಸಿ ದಾಖಲಾಗಿದ್ದ



ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ಕಾನೂನಿಗೆ ಅನುಗುಣವಾಗಿ ಆಸ್ತಿಗೆ ಸೂಕ್ತ ಪರಿಹಾರ ನೀಡದೆ ಅವರಿಂದ ಆಸ್ತಿ ವಶಪಡಿಸಿಕೊಳ್ಳುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

2003ರ ಜನವರಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈ ಯೋಜನೆ ಗಾಗಿ ಜಮೀನು ವಶಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಹೊರಡಿ ಸಿತ್ತು. 2005ರ ನವೆಂಬರ್‌ನಲ್ಲಿ ಜಮೀನನ್ನು ವಶಕ್ಕೆ ತೆಗೆದುಕೊಳ್ಳ ಲಾಗಿತ್ತು. ಆದರೆ ತಮ್ಮ ಆಸ್ತಿಗಳಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂದು ಜಮೀನು ಕಳೆದುಕೊಂಡ ಅರ್ಜಿದಾರರು ಕಳೆದ 22 ವರ್ಷಗಳಿಂದ ಹಲವು ಬಾರಿ ನ್ಯಾಯಾಲಯಗಳ ಬಾಗಿಲು ತಟ್ಟಿದ್ದಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅರ್ಜಿದಾರರು ಪರಿಹಾರ ಪಡೆಯುವಲ್ಲಿ ವಿಳಂಬವಾಗಲು ಯಾವುದೇ ಕಾರಣಗಳಿಲ್ಲ. ಆದರೆ, ರಾಜ್ಯ ಸರ್ಕಾರ ಹಾಗೂ ಕೈಗಾರಿಕಾ ಅಭಿವೃದ್ಧಿ ಮಂಡಳಿ ನಿರ್ಲಕ್ಷ್ಯದ ಕಾರಣದಿಂದ ಅರ್ಜಿದಾರರಿಗೆ ಪರಿಹಾರ ದೊರೆತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಾಂಗ ನಿಂದನೆಗೆ ಸಂಬಂಧಿಸಿದಂತೆ ನೋಟಿಸ್ ಗಳನ್ನು ಹೊರಡಿಸಿದ ನಂತರ ವಿಶೇಷ ಭೂಸ್ವಾಧೀನ ಅಧಿಕಾರಿಯ ಮೂಲಕ 2019ರ ಏಪ್ರಿಲ್ 22ರಂದು ಪರಿಹಾರ ನಿರ್ಧರಿಸಲಾಗಿದೆ. ಪರಿಹಾರ ನಿರ್ಧರಿಸುವಾಗ 2011ರ ಮಾರ್ಗಸೂಚಿ ಮೌಲ್ಯಗಳನ್ನು ಪರಿಗಣಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

2003ರ ಮಾರುಕಟ್ಟೆ ಮೌಲ್ಯ ಆಧರಿಸಿ ಪರಿಹಾರ (2ನೇ ಪುಟಕ್ಕೆ)

## ಅಜ್ಮೀರ್ ಷರೀಫ್ ದರ್ಗಾಗೆ ಚಾದರ್ ಕಳಿಸಿದ ಪ್ರಧಾನಿ

ನವದೆಹಲಿ, ಜ. 3- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಜ್ಮೀರ್ ಷರೀಫ್ ದರ್ಗಾಗೆ ಚಾದರ್ ಕಳಿಸಿದ್ದಾರೆ. ಖ್ವಾಜಾ ಮೊಯಿನುದ್ದೀನ್ ಚಿಸ್ತಿ ಅವರ ಉರುಸ್ ಹಿನ್ನೆಲೆಯಲ್ಲಿ ಜನತೆಗೆ ಶುಭಾಶಯ ತಿಳಿಸಿರುವ ಪ್ರಧಾನಿ, ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಮೂಲಕ ಚಾದರ್ ಕಳಿಸಿದ್ದಾರೆ.

ಪ್ರಧಾನಿ ಚಾದರ್ ನೀಡುವ ಚಿತ್ರವನ್ನು ಸಚಿವ ರಿಜಿಜು ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಚಿತ್ರದಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಜಮಾಲ್ ಸಿದ್ದಿಕಿ (2ನೇ ಪುಟಕ್ಕೆ)

## ಬಿಜೆಪಿಯಿಂದ 15 ದಿನಗಳ ಸಂವಿಧಾನ ಅಭಿಯಾನ

ನವದೆಹಲಿ , ಜ. 3- ಸಂವಿಧಾನದ ಮೌಲ್ಯಗಳ ಕುರಿತು ಅರಿವು ಮೂಡಿಸಲು ಹಾಗೂ ಸಂವಿಧಾನ ರಚನೆಯಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಹೊಂದಿರುವ ಪಾತ್ರದ ಬಗ್ಗೆ ತಿಳಿಸಲು ಬಿಜೆಪಿ 15 ದಿನಗಳ ಅಭಿಯಾನ ನಡೆಸಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಸಂವಿಧಾನಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ನಿರಂತರವಾಗಿ ನಡೆಸುತ್ತಿರುವ ಟೀಕಾ ಪ್ರಹಾರಕ್ಕೆ ಉತ್ತರಿಸಲು ಗಣರಾಜ್ಯೋತ್ಸವಕ್ಕೆ ಮುಂಚೆ ಈ ಅಭಿಯಾನ ನಡೆಸಲಾಗುವುದು.

# ದಾವಣಗೆರೆ ಸೇರಿ 6 ಸ್ಮಾರ್ಟ್ ಸಿಟಿ ಯೋಜನೆ ಕಾಮಗಾರಿಗಳ ಸಂಪೂರ್ಣ ತನಿಖೆಗೆ ಸೂಚನೆ

**ಸಮಿತಿ ರಚಿಸಿ, ತನಿಖೆ ನಡೆಸಿ 3 ತಿಂಗಳೊಳಗೆ ವರದಿ ಸಲ್ಲಿಸಲು ಸಚಿವ ಭೈರತಿ ಸುರೇಶ್ ಸೂಚನೆ**

ಬೆಂಗಳೂರು, ಜ. 3- ಸ್ಮಾರ್ಟ್ ಸಿಟಿ ಅಭಿಯಾನದಡಿ ಬೆಂಗಳೂರು ಹೊರತುಪಡಿಸಿ 6 ಸ್ಮಾರ್ಟ್ ಸಿಟಿ ಯೋಜನೆಗಳ ಕಾಮಗಾರಿಗಳ ಸಂಪೂರ್ಣ ತನಿಖೆ ನಡೆಸಿ ವರದಿ ನೀಡುವಂತೆ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಖಾತೆ ಸಚಿವ ಬೈರತಿ ಸುರೇಶ್ ಸೂಚಿಸಿದ್ದಾರೆ.

ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ ಹಾಗೂ ತುಮಕೂರು ನಗರಗಳ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸ್ಮಾರ್ಟ್ ಸಿಟಿ ಅಭಿಯಾನ ಪ್ರಾರಂಭದಿಂದ ಇದುವರೆಗೆ 7 ನಗರಗಳಲ್ಲಿ 6415.51 ಕೋಟಿ ರೂ. ಕಾಮಗಾರಿಗಳು ನಡೆದಿವೆ, ಪೂರ್ಣಗೊಂಡಿರುವ ಹಲವು ಕಾಮಗಾರಿಗಳು ತೃಪ್ತಿದಾಯಕವಾಗಿಲ್ಲದ ಕಾರಣ ಸಮಿತಿ ರಚಿಸಿ, ತನಿಖೆ ನಡೆಸಿ 3 ತಿಂಗಳೊಳಗೆ ವರದಿ ಸಲ್ಲಿಸಬೇಕು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ 50:50ರ ಅನುಪಾತದಅನುದಾನದಡಿಕಾಮಗಾರಿಕೈಗೆತ್ತಿಕೊಂಡಿದ್ದು, ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿವೆ, ಬಹುತೇಕ ರಸ್ತೆ ನಿರ್ಮಾಣ, ಒಳಚರಂಡಿ, ಉದ್ಯಾನ ವನಗಳ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳಿಗೆ ಮಾಡಿರುವ ಅನುದಾನ ವೆಚ್ಚ ಬೇಸರ ತಂದಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಮಪಾಲು ಅನುದಾನವನ್ನು ಸ್ಮಾರ್ಟ್ ಶಾಲೆಗಳು, ಆಸ್ಪತ್ರೆ, ಗ್ರಂಥಾಲಯ, ಬಸ್ ನಿಲ್ದಾಣ ಸೇರಿದಂತೆ, ಶಾಶ್ವತ ಕಟ್ಟಡಗಳ ನಿರ್ಮಾಣಕ್ಕೆ ವೆಚ್ಚ ಮಾಡಬೇಕಾಗಿತ್ತು.

ಸ್ಮಾರ್ಟ್ ಸಿಟಿ ಅಭಿಯಾನ ಕಾಮಗಾರಿಗಳು ಸರ್ಕಾರದ ಆಸ್ತಿಗಳನ್ನು ವೃದ್ಧಿಸುವಂತೆ ಇರಬೇಕೇ ಹೊರತು ರಸ್ತೆ ನಿರ್ಮಾಣ, ಚರಂಡಿ ಹಾಗೂ ಇತರೆ ಕಾಮಗಾರಿಗಳಿಗೆ ಬಳಸಿರುವುದು ಸೂಕ್ತವಲ್ಲ ಎಂದರು. ಪ್ರತಿ ಸ್ಮಾರ್ಟ್ ಸಿಟಿಗೆ ಅಂದಾಜು 990 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ, ಇದರಲ್ಲಿ ಶೈಕ್ಷಣಿಕ ವಲಯಕ್ಕೆ ಶೇ.2, ಇಂಧನ ಶೇ.8, ಆರೋಗ್ಯ ಶೇ.2, ಮಾಹಿತಿ ತಂತ್ರಜ್ಞಾನ ವಲಯಕ್ಕೆ ಶೇ.8, ಒಟ್ಟಾರೆ ಶೇ.20ರಷ್ಟು, ಕೆರೆ ಮತ್ತು ಉದ್ಯಾನವನಕ್ಕೆ ಶೇ.9, ಮಾರುಕಟ್ಟೆಗೆ ಶೇ.5, ರಸ್ತೆ ನಿರ್ಮಾಣಕ್ಕೆ ಶೇ.36, ಕ್ರೀಡಾ ವಲಯಕ್ಕೆ ಶೇ.5, ಸಾರಿಗೆ ವ್ಯವಸ್ಥೆಗೆ ಶೇ.8 ಹಾಗೂ ಇತರೆ ಮೂಲಭೂತ ಸೌಕರ್ಯಗಳ ವೃದ್ಧಿಗೆ ಶೇ.18ರಷ್ಟು ಅನುದಾನ ಹಂಚಿಕೆಯಾಗಿದೆ.

ಈ ವಲಯಗಳ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆಯಾದರೂ ಕೆಲವು ಸಮರ್ಪಕವಾಗಿಲ್ಲದ ಕಾರಣ ತನಿಖೆಗೆ ಒಳಪಡಿಸಬೇಕಾಗಿದೆ ಎಂದರು. ಮಾರ್ಚ್ 2025ರ ಅಂತ್ಯಕ್ಕೆ ಸ್ಮಾರ್ಟ್ ಸಿಟಿ ಅಭಿಯಾನ ಮುಗಿಯಲಿದ್ದು, ಬರಬೇಕಿರುವ ಉಳಿಕೆ ಮೊತ್ತ ಹಾಗೂ ಹಾಲಿ ಉಳಿದಿರುವ ಮೊತ್ತದಲ್ಲಿ ಆಧುನಿಕ ತಂತ್ರಜ್ಞಾನದ ಅಂತರ್ ರಾಷ್ಟ್ರೀಯ ಮಟ್ಟದ ಸ್ಮಾರ್ಟ್ ಶಾಲೆಗಳ ನಿರ್ಮಾಣಕ್ಕೆ ವಿನಿಯೋಗಿಸಬೇಕು.

ಇದರಿಂದ ಬಡ ಮಕ್ಕಳೂ (2ನೇ ಪುಟಕ್ಕೆ)

## ಪೂರ್ಣಾವಧಿ ಅಧಿಕಾರ ಮುಗಿಸಿ

### ಸಚಿವ ಜಾರಕಿಹೊಳಿ ಔತಣಕೂಟದಲ್ಲಿ ಸಚಿವರಿಂದ ಸಿದ್ದರಾಮಯ್ಯಗೆ ಬೆಂಬಲ

ಬೆಂಗಳೂರು, ಜ. 3- ಯಾರ ಒತ್ತಡಕ್ಕೂ ಮಣಿಯದೇ ಒಳ್ಳೆ ಆಡಳಿತ ನೀಡಿ, ಪೂರ್ಣಾವಧಿ ಅಧಿಕಾರ ಮುಗಿಸಿ, ನಿಮ್ಮ ಜೊತೆ ನಾವಿದ್ದೇವೆ ಎಂದು ಸಚಿವರುಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಬೇಡಿ, ಅವರನ್ನು ನಾವು ನಾಯಕರಾಗಿ ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಗುರುವಾರ ಸಂಪುಟ ಸಭೆ ನಂತರ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಮ್ಮ ನಿವಾಸದಲ್ಲಿ, ಮಂತ್ರಿಗಳು ಹಾಗೂ ಹಿರಿಯ ಶಾಸಕರಿಗೆ ಏರ್ಪಡಿಸಿದ್ದ ಔತಣಕೂಟದಲ್ಲಿ ಸಿದ್ದರಾ ಮಯ್ಯ ಅವರಿಗೆ ಈ ಸಂದೇಶ ನೀಡಿದ್ದಾರೆ ನ್ನಲಾಗಿದೆ.

ಔತಣಕೂಟಕ್ಕೂ ಮೊದಲು ಅನೌಪಚಾರಿಕ ವಾಗಿ ಮಾತನಾಡುವಾಗ ಜಾರಕಿಹೊಳಿ ಅವರೇ ವಿಷಯ ಪ್ರಸ್ತಾಪಿಸಿ, ಶಿವಕುಮಾರ್ ನಾಯಕತ್ವ ಒಪ್ಪಲು ನಾವು



ಸಿದ್ಧರಿಲ್ಲ. 2028ರವರೆಗೂ ನೀವೇ ಅಧಿಕಾರದಲ್ಲಿ ಮುಂದುವರೆಯಬೇಕು, ಆ ನಂತರ ನಾನು, ನಾಯಕತ್ವ ವಹಿಸಿಕೊಳ್ಳಲು ಸಿದ್ಧ, ಒಂದು ವೇಳೆ ವರಿಷ್ಠರು ನನಗೆ ಅವಕಾಶ ಮಾಡಿಕೊಡದಿದ್ದರೆ, ಶಿವಕುಮಾರ್ ನಾಯಕತ್ವಕ್ಕೆ ಅಂದೂ ನನ್ನ ವಿರೋಧ ಇದ್ದೇ ಇರುತ್ತದೆ ಎಂದಿದ್ದಾರೆ.

ಸತೀಶ್ ನೀಡಿದ ಹೇಳಿಕೆಗೆ ಮುಖ್ಯ ಮಂತ್ರಿ ಅವರೇ ಸ್ವಲ್ಪ ವಿಚಲಿತರಾದಂತೆ ಕಂಡರಾದರೂ ಉಳಿದ ಕೆಲವು ಸಚಿವರುಗಳು ಇದಕ್ಕೆ ಧ್ವನಿಗೂಡಿಸಿದರು.

ಚಲುವರಾಯಸ್ವಾಮಿ ಸೇರಿದಂತೆ ತಟಸ್ಥರಾಗಿದ್ದ ಸಚಿವರುಗಳು, ಇಂತಹ ಹೇಳಿಕೆಗೆ ಯಾವ ರೀತಿ ಪ್ರತಿಕ್ರಿಯಿಸ ಬೇಕೆಂದು ಅರ್ಥವಾಗದೆ, ಮೌನಕ್ಕೆ (4ನೇ ಪುಟಕ್ಕೆ)





## ಎಸ್ಸೆಸ್ ಭೇಟಿ ಮಾಡಿದ ಸಾಣೇಹಳ್ಳಿ, ಪಂಚಮಸಾಲಿ ಶ್ರೀ

ಬೆಂಗಳೂರು, ಡಿ. 3- ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರನ್ನು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇಂದು ಭೇಟಿ ಮಾಡಿ ಕುಶಲೋಪರಿ ವಿಚಾರಿಸಿದರು. ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿಯವರೂ ಸಹ ಶುಕ್ರವಾರ ಆಸ್ಪತ್ರೆಯಲ್ಲಿ ಶಾಮನೂರು ಶಿವಶಂಕರಪ್ಪನವರ ಕುಶಲೋಪರಿ ವಿಚಾರಿಸಿ, ಶೀಘ್ರ ಗುಣಮುಖರಾಗಲೆಂದು ಹಾರೈಸಿ, ಆಶೀರ್ವದಿಸಿದರು.

## ಪ್ರಾಯೋಗಿಕ ಸಂಚಾರದಲ್ಲಿ 180 ಕಿ.ಮೀ. ತಲುಪಿದ ವಂದೇ ಭಾರತ್ ಸ್ಲೀಪರ್ ರೈಲು

ನವದೆಹಲಿ, ಜ.3- ರಾಜಸ್ಥಾನದ 40 ಕಿಮೀ ಮಾರ್ಗದಲ್ಲಿ ಕಳೆದ ಮೂರು ದಿನಗಳಿಂದ ನಡೆಸಲಾದ ಹಲವು ಪ್ರಾಯೋಗಿಕ ಸಂಚಾರಗಳಲ್ಲಿ ವಂದೇ ಭಾರತ್ ಸ್ಲೀಪರ್ ರೈಲು ಗಂಟೆಗೆ 180 ಕಿಮೀ ವೇಗ ತಲುಪಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.



ಈ ತಿಂಗಳ ಅಂತ್ಯದವರೆಗೂ ಪ್ರಾಯೋಗಿಕ ಪರೀಕ್ಷೆ ಮುಂದುವರೆಯಲಿದೆ. ನಂತರ ದೇಶಾದ್ಯಂತ ವಿಶ್ವ ದರ್ಜೆಯ ದೂರ ಸಂಚಾರಿ ರೈಲ್ವೆ ಪ್ರಯಾಣ ಸೌಲಭ್ಯ ಕಲ್ಪಿಸಲಾಗುವುದು ಎಂದು ರೈಲ್ವೆ ಸಚಿವಾಲಯ ತಿಳಿಸಿದೆ.

## ಜಿಎಂ ಬೆಳೆ ಸಮಿತಿ ನಿರ್ಧಾರಗಳಲ್ಲಿ ಪಾರದರ್ಶಕತೆಗಾಗಿ ನಿಯಮ ಕಠಿಣ

ನವದೆಹಲಿ, ಜ.3- ಕುಲಾಂತರಿ ತಳಿಗಳ ಪರಿಶೀಲನಾ ಸಮಿತಿಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ನಿಯಮಗಳ ತಿದ್ದುಪಡಿಗಾಗಿ ಕೇಂದ್ರ ಸರ್ಕಾರ ಮುಂದಾಗಿದೆ.

ಕೇಂದ್ರ ಸರ್ಕಾರ ಕಳೆದ ಡಿಸೆಂಬರ್ 31 ರಂದು ಅಧಿಸೂಚನೆಯೊಂದನ್ನು ಹೊರಡಿಸಿದೆ. ಇದರ ಅನ್ವಯ ಸಮಿತಿಯ ಸದಸ್ಯರು ತಾವು ನೀಡುವ ತೀರ್ಪುಗಳಿಂದ ವೈಯಕ್ತಿಕ ಇಲ್ಲವೇ ವೃತ್ತಿಪರ ಹಿತಾಸಕ್ತಿ ಏನಾದರೂ ಇದೆಯೇ ಎಂಬ ಬಗ್ಗೆ ಸ್ಪಷ್ಟಪಡಿಸಬೇಕಿದೆ.

ಜಿಇಎಸಿ ಸಮಿತಿಯು ಕುಲಾಂತರಿ ಜೀವಿಗಳು ಬೆಳೆ ಹಾಗೂ ಉತ್ಪನ್ನಗಳ ಅನುಮೋದನೆ ಹಾಗೂ ನಿಯಂತ್ರಣದಲ್ಲಿ ಭಾಗಿಯಾಗಿದೆ. (4ನೇ ಪುಟಕ್ಕೆ)


॥ ಶ್ರೀ ಶಿವ ನಾರದಮುನಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ ಜಯನಗರ ವಾಸಿಗಳಾದ
ಅಣಬೇರು ಮಾಳಿಗೇರ ಮಹೇಶ್ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 26.12.2024ನೇ ಗುರುವಾರ ಬೆಳಗಿನಜಾವ 5 ಗಂಟೆಗೆ ನಮ್ಮ ಪೂಜ್ಯ ಮಾತೃಶ್ರೀಯವರಾದ
**ಶ್ರೀಮತಿ ಶಾಂತಮ್ಮನವರು**
(ದಿ॥ ಶ್ರೀ ಅಣಬೇರು ಮಾಳಿಗೇರ ನಾರಪ್ಪ ಮೇಷ್ಟ್ರು ಇವರ ಧರ್ಮಪತ್ನಿ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 05-01-2025ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ
ನಮ್ಮ ಸ್ವಗೃಹ, # 401/20, ಜಯನಗರ,
'ಬಿ' ಬ್ಲಾಕ್, BSNL ಟವರ್ ಹತ್ತಿರ, ದಾವಣಗೆರೆಯಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
✦ ಅಣಬೇರು ಮಾಳಿಗೇರ ಶಿವಪ್ಪ ಮತ್ತು ಸಹೋದರರು, ಮಕ್ಕಳು, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮಾಳಿಗೇರ ವಂಶಸ್ಥರು, ಅಣಬೇರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಿ, ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂದ : ಶ್ರೀ ಅಣಬೇರು ಮಹೇಶ್ ಮತ್ತು ಸಹೋದರರು, # 401/20, ಜಯನಗರ, 'ಬಿ' ಬ್ಲಾಕ್, BSNL ಟವರ್ ಹತ್ತಿರ, ದಾವಣಗೆರೆ. ಮೊ. : 99008 67622






# ವಿದ್ಯೆಗಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ

## ಉಕ್ಕಡಗಾತ್ರಿ : ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ನಂದಿಗಾವಿ ಶ್ರೀನಿವಾಸ್ ಅಭಿಮತ

ಮಲೇಬೆನ್ನೂರು, ಜ.3- ಪ್ರಸ್ತುತ ದಿನಗಳಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಸಿಗುತ್ತಿದ್ದು, ವಿದ್ಯೆಗಿಂತ ದೊಡ್ಡ ಆಸ್ತಿ ಮತ್ತೊಂದಿಲ್ಲ ಎಂದು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಹರಿಹರ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಹೇಳಿದರು.

ಅವರು, ಗುರುವಾರ ರಾತ್ರಿ ಉಕ್ಕಡಗಾತ್ರಿ ಗ್ರಾಮದಲ್ಲಿ ಗ್ರಾಮದ ಯುವಕರು ಹಮ್ಮಿಕೊಂಡಿದ್ದ ಮಹಾತ್ಮರ ದಿನಾಚರಣೆ ಮತ್ತು 5ನೇ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಬಹುತೇಕ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಕೆಲಸ ಮಾಡುತ್ತಿದ್ದು, ಅದಕ್ಕಾಗಿ ಬಹಳ ಶ್ರಮವಹಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಪೋಷಕರು, ಶಿಕ್ಷಕರ ಮತ್ತು ಸರ್ಕಾರಗಳ ಸಹಕಾರ, ಪ್ರೋತ್ಸಾಹದೊಂದಿಗೆ ಮಕ್ಕಳು ಚೆನ್ನಾಗಿ ಓದಿ ಮಾನವೀಯತೆ ಹೊಂದಿರುವ ಪ್ರಜೆಗಳಾಗಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕೆಂದು ಮನವಿ ಮಾಡಿದರು.

ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರುವ ಕೆಲಸವನ್ನು ಎಲ್ಲಾ ಗ್ರಾಮಗಳಲ್ಲಿ ಶಿಕ್ಷಣ ಕಲಿತ ಯುವಕರು ಮಾಡಬೇಕೆಂದರು.

ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕವ ಮೂಲಕ ಉದ್ಘಾಟಿಸಿದ ವಾಣಿಜ್ಯ ತೆರಿಗೆ ಇಲಾಖೆಯ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್ ಮಾತನಾಡಿ, ಹಳ್ಳಿಗಳಲ್ಲಿ ಮಾತ್ರ ನಿಜವಾದ ಸಂಸ್ಕಾರ, ಸಂಗೀತ ಉಳಿದಿದ್ದು, ಹಳ್ಳಿಗಳಲ್ಲಿ ಬೆಳೆದ ಮಕ್ಕಳಲ್ಲಿ ಔಪಚಾರಿಕ ಶಿಕ್ಷಣ ಜೊತೆಗೆ ಅನೌಪಚಾರಿಕ ಶಿಕ್ಷಣವೂ ಇರುತ್ತದೆ. ಇದರಿಂದಾಗಿ ಮಕ್ಕಳಲ್ಲಿ ಗ್ರಾಮೀಣ ಸೊಗಡು, ಸಂಬಂಧಗಳು, ಕಷ್ಟ-ಸುಖದ ಅರಿವು ಹೆಚ್ಚಾಗಿರುತ್ತದೆ. ಮೌಲ್ಯಾ ಧರಿತ ಶಿಕ್ಷಣದಿಂದ ಮಕ್ಕಳ ಬದುಕು ಬಂಗಾರ ವಾಗುತ್ತದೆ. ಈ ನಿಟ್ಟಿನಲ್ಲಿ ಪೋಷಕರು, ಶಿಕ್ಷಕರು ಸೇರಿ ಮಕ್ಕಳನ್ನು ಬೆಳೆಸಬೇಕೆಂದು ಮಂಜುನಾಥ್ ಅಭಿಪ್ರಾಯಪಟ್ಟರು.

ಮಹಾತ್ಮರು, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಕ್ಕಳಿಗೆ ತಿಳಿಸುವ ಕೆಲಸವನ್ನು ಕಡ್ಡಾಯವಾದಾಗ ಮಾತ್ರ ಅವರಲ್ಲಿ ಹೊಸ ಚೈತನ್ಯ ಬೆಳೆಯಲು ಸಾಧ್ಯ ಎಂದು ಮಂಜುನಾಥ್ ಹೇಳಿದರು.

ಶ್ರೀ ಕರಿಬಸವೇಶ್ವರ ಗದ್ದಿಗೆ ಟ್ರಸ್ಟ್ ಕಮಿಟಿಯ ಕಾರ್ಯದರ್ಶಿ ಎಸ್.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ವೇಳೆ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಅವರ ಮುಂದಿನ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಯಿತು.

ಗ್ರಾ.ಪಂ. ಉಪಾಧ್ಯಕ್ಷ ಚಂದೇಗೌಡ, ಪಶು ವೈದ್ಯಾಧಿಕಾರಿ ಡಾ. ಅರುಣ್ ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷ ಭಾರತಿ ಕಟಿಗೇರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದರು.

ಹರಿಹರ ತಾ.ಕುರುಬ ಸಂಘದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಗ್ರಾ.ಪಂ. ಸದಸ್ಯರಾದ ಹೇಮಂತ್, ದೇವೇಂದ್ರಪ್ಪ, ಶಂಕ್ರಪ್ಪ, ರಾಜಶೇಖರಯ್ಯ, ನಂದಿಗುಡಿಯ ವೀರಯ್ಯ, ಶ್ರೀಕಾಂತ್, ಕುಂಬಳೂರು ವಾಸುದೇವಮೂರ್ತಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಗದಿಗೇಶ್ ಕಾಯಕದ ಪ್ರಾರ್ಥಿಸಿದರು. ವಕೀಲ ಮಂಜು ದೊಡ್ಮನಿ ಸ್ವಾಗತಿಸಿದರು. ಸಂಗೀತಾ ಬಂಗೇರ, ಲೀಲಾವತಿ ನಿರೂಪಿಸಿ, ವಂದಿಸಿದರು.

# ದಾವಣಗೆರೆಯಲ್ಲಿ ನಾಳಿನ ಕನಕ ಜಯಂತ್ಯೋತ್ಸವಕ್ಕೆ ಹರಿಹರದಿಂದ 10 ಸಾವಿರ ಜನ : ಎಸ್.ರಾಮಪ್ಪ

ಹರಿಹರ,ಜ.3- ಜಿಲ್ಲಾ ಕುರುಬ ಸಮಾಜ ಹಾಗೂ ಸಿದ್ದರಾಮಯ್ಯನವರ ಅಭಿಮಾನಿ ಬಳಗದಿಂದ ನಾಡಿದ್ದು ದಿನಾಂಕ 5 ರ ಭಾನುವಾರ ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾ ಮಟ್ಟದ 537ನೇ ಕನಕದಾಸರ ಜಯಂತ್ಯೋತ್ಸವ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ಎಸ್.ರಾಮಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.




ಅಂದು ಬೆಳಿಗ್ಗೆ 11.30ಕ್ಕೆ ಸಿಎಂ ಸಿದ್ಧರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕನಕದಾಸರ ಪುತ್ಥಳಿ ಉದ್ಘಾಟಿಸುವರು. ಕಾಗಿನೆಲೆ ಪೀಠದ ಶ್ರೀ ನಿರಂಜನಾನಂದಪುರಿ ಶ್ರೀಗಳು, ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳು, ವಾಲ್ಮೀಕಿ ಪೀಠದ ಪ್ರಸನ್ನಾನಂದ ಶ್ರೀಗಳು, ಭೋವಿ ಗುರು ಪೀಠದ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಶ್ರೀಗಳು ಸೇರಿದಂತೆ ವಿವಿಧ ಧಾರ್ಮಿಕ ಮುಖಂಡರು ಸಾನ್ನಿಧ್ಯ ವಹಿಸುವರು. ಹರಿಹರ ತಾಲ್ಲೂಕಿನಿಂದ ಅಂದಾಜು 10 ಸಾವಿರಕ್ಕೂ ಅಧಿಕ ಜನರು ಪಾಲ್ಗೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ಮುಖಂಡ ಎನ್.ಎಚ್.ಶ್ರೀನಿವಾಸ್ ಮಾತನಾಡಿ, ಜಯಂತಿ ನಿಮಿತ್ತ ನಾಳೆ ದಿನಾಂಕ 4ರ ಶನಿವಾರ ಬೆಳಿಗ್ಗೆ 9.30ಕ್ಕೆ ದಾವಣಗೆರೆ ಕಾಳಿದಾಸ ವೃತ್ತದಿಂದ ಬೈಕ್ ರಾ ಲಿ ಆಯೋಜಿಸಲಾಗಿದೆ. ನಾಡಿದ್ದು ದಿನಾಂಕ 5ರ ಭಾನುವಾರ ಬೆಳಗ್ಗೆ 9.30ಕ್ಕೆ ದುರ್ಗಾಂಬಿಕಾ ದೇವಸ್ಥಾನದಿಂದ ಆರಂಭವಾಗುವ ಬೃಹತ್ ಮೆರವಣಿಗೆಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಚಾಲನೆ ನೀಡುವರು ಎಂದು ತಿಳಿಸಿದರು.

ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷ ಹಾಲೇಶಪ್ಪ ಮಾತನಾಡಿ, ಕನಕದಾಸರು ಕೇವಲ ಕುರುಬರಿಗೆ ಮಾತ್ರ ಸೀಮಿತವಲ್ಲ, ಆದ್ದರಿಂದ ಜಿಲ್ಲೆಯ ಎಲ್ಲಾ ಸಮಾಜಗಳ ಜಿಲ್ಲಾಧ್ಯಕ್ಷರುಗಳಿಗೆ ಹಾಗೂ ಎಲ್ಲಾ ಶಾಸಕರುಗಳಿಗೆ ಆಹ್ವಾನ ನೀಡಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ದಾವಣಗೆರೆ ಪಾಲಿಕೆ ಸದಸ್ಯ ಶ್ರೀನಿವಾಸ್, ಕೆಪಿಸಿಸಿ ಸದಸ್ಯ ಬಿ.ರೇವಣಸಿದ್ದಪ್ಪ, ವಕೀಲರಾದ ಎಂ.ನಾಗೇಂದ್ರಪ್ಪ, ಕೆ.ಬಿ.ರಾಜಶೇಖರ್, ಕರಿಬಸಪ್ಪ, ಶಿವಣ್ಣ, ರುದ್ರಣ್ಣ, ಸಿ.ಎನ್.ಹುಲಿಗೇಶ್ ಇತರರಿದ್ದರು.

# ಯುವಜನೋತ್ಸವ, ಕೆಎಸ್ಆರ್‌ಟಿಸಿಯಿಂದ ಕಾರ್ಯಕ್ರಮ ಸ್ಥಳಗಳಿಗೆ ಬಸ್ ಸೌಕರ್ಯ

ದಾವಣಗೆರೆ, ಜ. 3 - ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ನಾಡಿದ್ದು ದಿನಾಂಕ 5 ಮತ್ತು 6 ರಂದು ರಾಜ್ಯ ಮಟ್ಟದ ಯುವಜನೋತ್ಸವವನ್ನು ಏರ್ಪಡಿಸಲಾಗಿದೆ.



ಯುವಜನೋತ್ಸವ ಕಾರ್ಯಕ್ರಮದ ಅಂಗ ವಾಗಿ ನಾಡಿದ್ದು ದಿನಾಂಕ 5 ರ ಸಂಜೆ 8 ಗಂಟೆಯಿಂದ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಮತ್ತು ತಂಡದವರಿಂದ ಎಂಬಿಎ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಎರಡು ದಿನಗಳ ಕಾಲ ವಿವಿಧ ವೇದಿಕೆಗಳಲ್ಲಿ ಯುವಜನೋತ್ಸವ ಸ್ಪರ್ಧೆಗಳು ನಡೆಯುವುದರಿಂದ ಸಾರ್ವಜನಿಕರು ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡಲು ಅನುಕೂಲವಾಗಲೆಂದು ಕೆ.ಎಸ್.ಆರ್.ಟಿ.ಸಿ.ಯಿಂದ ಕಾರ್ಯಕ್ರಮ ನಡೆಯುವ ಎಲ್ಲಾ ಸ್ಥಳಗಳಿಗೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣದ ಮುಂಭಾಗದಿಂದ ಎವಿಕೆ ಕಾಲೇಜು ರಸ್ತೆ, ಗುಂಡಿ ವೃತ್ತ, ಲಕ್ಷ್ಮಿ ಫ್ಲೋರ್‌ಮಿಲ್, ಬಾಪೂಜಿ ಎಂಬಿಎ ಕಾಲೇಜು, ಡಾ. ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬಿಐಇಟಿ ಕಾಲೇಜ್, ಲಲಿತಕಲಾ ಮಹಾವಿದ್ಯಾಲಯ, ಜೆಜೆಎಂ ಕಾಲೇಜು ಮೂಲಕ ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಕೆಎಸ್ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಸ್‌ಗಳು ನಿರಂತರವಾಗಿ ಸಂಚರಿಸಲಿವೆ ಎಂದು ಕೆಎಸ್ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ವಿದ್ಯಾರ್ಥಿಗಳ ಬೃಹತ್ ಜಾಥಾ

**(1ನೇ ಪುಟದಿಂದ)** ಪಿ.ಎನ್.ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ್ ಎಂ.ಸಂತೋಷ್, ಮಂಜುನಾಥ್, ಜಿ.ಪಂ. ಉಪಕಾರ್ಯದರ್ಶಿ ಕೃಷ್ಣನಾಯ್ಕ, ಸಿಪಿಓ ಮಲ್ಲಾನಾಯ್ಕ್, ಡಿಡಿಪಿಯು ಕರಿಸಿದ್ದಪ್ಪ, ಡಿಡಿಪಿಐ ಕೊಟ್ರೇಶ್, ಡಿಆರ್‌ಸಿಎಸ್ ಮಧುಶ್ರೀನಿವಾಸ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ರೇಣುಕಾ, ಯುವ ಪ್ರಶಸ್ತಿ ಪುರಸ್ಕೃತ ಮಾಗನಹಳ್ಳಿ ಮಂಜುನಾಥ್ ಮತ್ತು ನಗರದ ಪದವಿಪೂರ್ವ, ಪದವಿ ಕಾಲೇಜುಗಳ ವಿದ್ಯಾರ್ಥಿಗಳು , ಸಾರ್ವಜನಿಕ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಸರ್ಕಾರಿ ಇಲಾಖೆಯ ಸಿಬ್ಬಂದಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

## ಆಸ್ತಿ ಸಂವಿಧಾನಿಕ ಹಕ್ಕು

**(1ನೇ ಪುಟದಿಂದ)** ನಿಗದಿಪಡಿಸಿದರೆ ನ್ಯಾಯ ಹಾಗೂ ಸಂವಿಧಾನದ 300ಎ ವಿಧಿಯ ಅಣಕವಾಗುತ್ತಿತ್ತು ಎಂದು ಸುಪ್ರೀಂ ಕೋರ್ಟ್ ಪೀಠ ತಿಳಿಸಿದೆ.

ಸಂವಿಧಾನದ 142ನೇ ವಿಧಿ ಮೂಲಕ ಸುಪ್ರೀಂ ಕೋರ್ಟ್‌ಗೆ ನೀಡಲಾಗಿರುವ ವಿಶೇಷ ಅಧಿಕಾರ ಬಳಸಲು ಇದು ಸೂಕ್ತ ಪ್ರಕರಣವಾಗಿದೆ. ಈ ಮೂಲಕ ಜಮೀನಿನ ಮಾರುಕಟ್ಟೆ ಮೌಲ್ಯ ನಿರ್ಧರಿಸುವ ದಿನಾಂಕ ಗುರುತಿಸಬೇಕಿದೆ ಎಂದು ನ್ಯಾಯಾಲಯ ಹೇಳಿದೆ.

ವಿಶೇಷ ಭೂಸ್ವಾಧೀನ ಅಧಿಕಾರಿಯು ಏಪ್ರಿಲ್ 22, 2019ರ ಮಾರುಕಟ್ಟೆ ಮೌಲ್ಯ ಆಧರಿಸಿ ಅರ್ಜಿದಾರರಿಗೆ ಪರಿಹಾರ ನಿಗದಿ ಪಡಿಸಬೇಕು. ಎರಡು ತಿಂಗಳ ಒಳಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಅರ್ಜಿದಾರರು 22 ವರ್ಷಗಳಿಂದ ತಮ್ಮ ಕಾನೂನು ಬದ್ಧ ಹಕ್ಕುಗಳಿಂದ ವಂಚಿತರಾಗಿದ್ದಾರೆ. ದಿನ ಕಳೆದಂತೆ ಹಣದ ಮೌಲ್ಯ ಕಡಿಮೆಯಾಗುತ್ತದೆ ಎಂಬುದನ್ನು ಕಡೆಗಣಿಸಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## ಕಾಮಗಾರಿಗಳ ತನಿಖೆಗೆ ಸೂಚನೆ

**(1ನೇ ಪುಟದಿಂದ)** ಕಲಿಕೆಯಲ್ಲಿ ಮುಂದುವರೆಯಬೇಕು, ಅತ್ಯಾಧುನಿಕ ಕಲಿಕಾ ಸಾಮಗ್ರಿಗಳು ಸ್ಮಾರ್ಟ್ ಶಾಲೆಗಳಲ್ಲಿ ಲಭ್ಯವಾಗಬೇಕು ಎಂದರು.

# ನಗರದಲ್ಲಿ ಇಂದು ಬಾಪೂಜಿ ಹೈಸ್ಕೂಲ್ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸಮಾಜಮುಖಿ ಕಾರ್ಯಕ್ರಮ

ದಾವಣಗೆರೆ, ಜ. 3- ನಗರದ ಬಾಪೂಜಿ ಹೈಸ್ಕೂಲ್ ಹಿರಿಯ ವಿದ್ಯಾರ್ಥಿಗಳ ಸಂಘವು ಸಮಾಜಮುಖಿ ಕಾರ್ಯಕ್ರಮಗಳನ್ನು ಕಳೆದ ವರ್ಷದಿಂದ ಹಮ್ಮಿಕೊಳ್ಳುತ್ತಾ ಬಂದಿದ್ದು, ಈ ಬಾರಿ ಕಂದನಕೋವಿ ಸರ್ಕಾರಿ ಶಾಲೆ ನವೀಕರಣ ಹಾಗೂ ಆರೋಗ್ಯ ಶಿಬಿರವನ್ನು ನಾಳೆ ದಿನಾಂಕ 4 ರ ಶನಿವಾರ ಬೆಳಿಗ್ಗೆ 10 ಕ್ಕೆ ಹಮ್ಮಿಕೊಳ್ಳುತ್ತಿದೆ ಎಂದು ಸಂಘದ ಅಧ್ಯಕ್ಷ ಎಸ್.ಟಿ. ವೀರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಬಾಪೂಜಿ ಹೈಸ್ಕೂಲ್‌ನ 1988 ರಿಂದ 2001 ರವರೆಗಿನ 14 ವರ್ಷಗಳ ವಿದ್ಯಾರ್ಥಿಗಳು 2022 ನೇ ವರ್ಷ 'ಸ್ನೇಹ ಸಮ್ಮಿಲನ' ದಲ್ಲಿ ಒಗ್ಗೂಡಿ ಅಭೂತಪೂರ್ವ ಕಾರ್ಯಕ್ರಮ ನಡೆಸಿದ್ದು ಜನಜನಿತವಾಗಿತ್ತು. ಈ ಸ್ನೇಹಬಂಧ ಮುಂದುವರೆದು ಸಮಾಜಮುಖಿ ಕಾರ್ಯಕ್ರಮ ನಡೆಸುವ ಸದುದ್ದೇಶದಿಂದ ಬಾಪೂಜಿ ಹೈಸ್ಕೂಲ್ ಅಲ್ಯುಮ್ನಿ ಸಂಘವನ್ನು ನೋಂದಣಿ ಮಾಡಿಸಲಾಯಿತು ಎಂದರು.

ಮಾಜಿ ಮೇಯರ್ ಎಸ್.ಟಿ.ವೀರೇಶ್ ಅಧ್ಯಕ್ಷತೆಯಲ್ಲಿ ಸಮಾನ ಮನಸ್ಕರೊಡಗೂಡಿ ಕಳೆದ ವರ್ಷ ಶಾಮನೂರಿನ ಜನತಾ ಕಾಲೋನಿಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ನವೀಕರಿಸಿ, ಪೀಠೋಪಕರಣಗಳನ್ನು ನೀಡಿ ತಮ್ಮ ಶಿಕ್ಷಣ ಪ್ರೇಮವನ್ನು ವ್ಯಕ್ತಪಡಿಸಿದ್ದರು.

ಜೊತೆಗೆ ಡಾಲರ್ಸ್ ಕಾಲೋನಿಯ ಉದ್ಯಾನವನದ ಮೇಲ್ವಿಚಾರಣೆ ವಹಿಸಿಕೊಂಡಿದ್ದಾರೆ. ಇದೀಗ ಮಾಯಕೊಂಡ ಕ್ಷೇತ್ರದ ಕಂದನಕೋವಿ ಗ್ರಾಮ ಪ್ರೌಢಶಾಲೆಗೆ ಸುಣ್ಣ ಬಣ್ಣ ಬಳಿಸಿ, ಗೋಡೆ ಚಿತ್ರಗಳನ್ನು ಬರೆಸಿ ಶಾಲಾ ಕಟ್ಟಡ ಸುಂದರಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ನಾಳೆ ದಿನಾಂಕ 4 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ನವೀಕರಣಗೊಂಡ ಶಾಲೆಯ ಉದ್ಘಾಟನೆ ಮತ್ತು ಸ್ನೇಹ ಸಮ್ಮಿಲನ ಹಾಗೂ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ಶಿಬಿರವನ್ನು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕ ಕೆ.ಎಸ್.ಬಸವಂತಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಿಡಿಪಿಐ ಜಿ. ಕೊಟ್ರೇಶ್, ಎಸ್. ಗೀತಾ, ಗ್ರಾ.ಪಂ. ಅಧ್ಯಕ್ಷೆ ಭಾರತಮ್ಮ ಮಹೇಶ್ವರಪ್ಪ, ಎಸ್.ಡಿ.ಎಂ.ಸಿ. ಅಧ್ಯಕ್ಷ ರಾಜಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ, ಕಂದನಕೋವಿ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಎಸ್.ಟಿ. ಸವಿತಾ ಭಾಗವಹಿಸಲಿದ್ದಾರೆ.

ಬಾಪೂಜಿ ಹೈಸ್ಕೂಲ್‌ನಲ್ಲಿ ಕಲಿತ ವಿದ್ಯಾರ್ಥಿಗಳು ಒಟ್ಟುಗೂಡಿ ಐದು ಲಕ್ಷ ರೂ. ವೆಚ್ಚದಲ್ಲಿ ಸರ್ಕಾರಿ ಶಾಲೆಯನ್ನು ನವೀಕರಿಸಲಾಗಿದೆ. ಗ್ರಾಮಸ್ಥರಿಗಾಗಿ ಅಂದು ಎಸ್ಎಸ್ ಕೇರ್ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಾಪೂಜಿ ಅಲ್ಯುಮ್ನಿ ಪದಾಧಿಕಾರಿಗಲಾದ ಕಿರುವಾಡಿ ವೀರೇಶ್, ಸಿದ್ಧಗಂಗಾ ಹೇಮಂತ್, ಸಂಜಯ್ ರೇವಣಕರ್, ಸುಭಾಷಿಣಿ, ಐನಳ್ಳಿ ಶುಭಾ, ಹೊನ್ನೂರು ಗಿರೀಶ್, ಬಿ.ಜೆ. ಅಭಿಷೇಕ್, ಗುರು ರೇವಣಕರ್, ಎಂ.ಸಿ. ಶ್ರೀನಿವಾಸ್, ಲಕ್ಷ್ಮೀಕಾಂತ್ ಉಪಸ್ಥಿತರಿದ್ದರು.

## ಹರಪನಹಳ್ಳಿ : ಐಗೋಳ ಚಿದಾನಂದ ಅವರಿಗೆ ಸನ್ಮಾನ



ಹರಪನಹಳ್ಳಿ, ಜ.3- ಹಡಗಲಿ ತಾಲ್ಲೂಕಿನ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿರುವ ನಗರ ಮನೋರಂಜನಾ ಕೇಂದ್ರದ ಅಧ್ಯಕ್ಷ ಐಗೋಳ ಚಿದಾನಂದ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಗರ ಮನೋರಂಜನಾ ಕೇಂದ್ರದ ಸದಸ್ಯರಾದ ಕಟ್ಟಿ ರಂಗಣ್ಣ, ಮುದ್ಗಲ್ ಶ್ರೀಧರ್ ಶೆಟ್ರು, ಕಾರ್ಯದರ್ಶಿ ಸಿ. ವಸಂತಕುಮಾರ್, ಅಂಬ್ಲಿ ಮಂಜುನಾಥ, ಶಂಬಣ್ಣ, ಗೊಂಗಡಿ ನಾಗರಾಜ, ವೀರನಗೌಡ ಸೇರಿದಂತೆ ಇತರರು ಇದ್ದರು

## ನಗರದಲ್ಲಿ ಇಂದು ಆಟೋ ಎಕ್ಸ್‌ಪೋ

ದಾವಣಗೆರೆ, ಜ.3- ಸದರನ್ ಹೋಟೆಲ್ ಆವರಣದಲ್ಲಿ ನಾಳೆ ದಿನಾಂಕ 4 ಹಾಗೂ 5ರಂದು ಬೃಹತ್ ಆಟೋ ಎಕ್ಸ್‌ಪೋ ಆಯೋಜಿಸಲಾಗಿದೆ ಎಂದು ಆ್ಯನಿ ಅಮೃತಾ ಶ್ರೀನಿವಾಸ್ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ನಾಳೆ ದಿನಾಂಕ 4ರಂದು ಬೆಳಿಗ್ಗೆ 11 ಗಂಟೆಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಆಟೋ ಎಕ್ಸ್‌ಪೋಗೆ ಚಾಲನೆ ನೀಡಲಿದ್ದಾರೆ. ದಾವಣಗೆರೆ ಶುಗರ್ಸ್ ಹಾಗೂ ಸದರನ್ ಹೋಟೆಲ್ ವ್ಯವಸ್ಥಾಪಕ ನಿರ್ದೇಶಕ ಅಭಿಜಿತ್ ವಿಶೇಷ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅಮೃತಾ ಐ.ಎನ್.ಸಿ. ಸಹ ಸಂಸ್ಥಾಪಕ ಹೆಚ್.ಡಿ. ಶ್ರೀನಿವಾಸ್ ಮಾತನಾಡಿ, 15ಕ್ಕೂ ಹೆಚ್ಚು ಪ್ರತಿಷ್ಠಿತ ಬ್ರಾಂಡ್ ಕಂಪನಿಯ ಕಾರು ಹಾಗೂ ದ್ವಿಚಕ್ರ ವಾಹನಗಳು ಎಕ್ಸ್‌ಪೋದಲ್ಲಿ ಪ್ರದರ್ಶನಗೊಳ್ಳಲಿವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಜಿ. ತಿಮ್ಮಾರೆಡ್ಡಿ, ಎ.ಕೆ. ಚನ್ನಪ್ಪ, ನಯನ ಎಸ್.ಪಾಟೀಲ್, ಎಸ್.ಪಿ. ಲೋಹಿತ್ ಪ್ರಸಾದ್, ಆಂಥೋನಿ ರಾಜ್ ಇದ್ದರು.

## ಹೊಳೆಸಿರಿಗೆರೆ : ಭದ್ರಾ ಪಿಎಸಿಎಸ್‌ಗೆ ಅವಿರೋಧ ಆಯ್ಕೆ



ಮಲೇಬೆನ್ನೂರು, ಜ. 3 - ಹೊಳೆಸಿರಿಗೆರೆ ಗ್ರಾಮದ ಭದ್ರಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಸಿ.ದೇವೇಂದ್ರಪ್ಪ ಮತ್ತು ಉಪಾಧ್ಯಕ್ಷರಾಗಿ ಮಾಗೋಡ ಚಂದ್ರಪ್ಪ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನೂತನ ನಿರ್ದೇಶಕರಾಗಿ ಎ. ಕೊಟ್ರಪ್ಪ, ಬ್ಯಾಲದಹಳ್ಳಿ ಮಂಜಪ್ಪ, ಎನ್. ತಿಪ್ಪೇಸ್ವಾಮಿ, ಟಿ. ಆಂಜನೇಯ, ಕೆ. ವೃಷಭೇಂದ್ರಪ್ಪ, ಕೆ. ಸುನಂದಮ್ಮ, ಮಂಜಮ್ಮ ಶಿಡೆನೂರು, ಕುರುಬರ ಶಿವಪ್ಪ, ಪರಶುರಾಮಪ್ಪ, ಮೈಗೊಳ ಹನುಮಂತಪ್ಪ ಇವರುಗಳೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘಗಳ ಸಹಾಯಕ ನಿರ್ಬಂಧಕರ ಕಛೇರಿಯ ಸಿಜಿ ಜಗದೀಶ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ. ಹಾಲೇಶಪ್ಪ, ಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಲಿಂಗನಗೌಡ ಮತ್ತಿತರರು ಈ ವೇಳೆ ಹಾಜರಿದ್ದು, ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಅಭಿನಂದಿಸಿದರು.

## ಎಲೆಬೇತೂರಿನಲ್ಲಿ ಇಂದು ತರಳಬಾಳು ಸಿರಿ ಸಂಭ್ರಮ

ಎಲೆಬೇತೂರು ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ, ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿ ಸಂಘದ ಸಮಾರೋಪ ಮತ್ತು ತರಳಬಾಳು ಸಿರಿ ಸಂಭ್ರಮವು ಇಂದು ಎಲೆಬೇತೂರು ಶಾಲಾ ಆವರಣದಲ್ಲಿ ನಡೆಯಲಿದೆ.

ಇಂದು ಸಂಜೆ 5 ಗಂಟೆಯಿಂದ ಶಾಲಾ ವಾರ್ಷಿಕೋತ್ಸವ ಮತ್ತು ತರಳಬಾಳು ಸಿರಿ ಸಂಭ್ರಮ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ. ಬಸವರಾಜಪ್ಪ ವಹಿಸಲಿದ್ದಾರೆ.

ಕೆ.ಜಿ. ಶೇಖರಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹೆಚ್.ಕೆ. ಲಿಂಗರಾಜು ಸಮಾರೋಪ ನುಡಿಗಳನ್ನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹೆಚ್.ಆರ್. ಶೇರ್ ಅಲಿ, ಕೆ.ಎಂ. ರೇವಣಸಿದ್ದಪ್ಪ, ಮರಿಕುಂಟೆ ನಾಗಪ್ಪ, ಬಿ. ಪ್ರಭು, ಬಿ.ಜಿ. ಸಂಗನಗೌಡ್ರು, ಕೆ.ಎನ್. ಸೋಮಶೇಖರಪ್ಪ, ಟಿ. ರಾಜಣ್ಣ, ಶ್ರೀಮತಿ ಸುಮ ಬಿ.ಎಸ್. ಸತೀಶ್ ಉಪಸ್ಥಿತರಿರುವರು.

## ಅಜ್ಮೀರ್ ಷರೀಫ್ ದರ್ಗಾಗೆ ಚಾದರ್ ಕಳಿಸಿದ ಪ್ರಧಾನಿ

**(1ನೇ ಪುಟದಿಂದ)** ಅವರೂ ಇದ್ದಾರೆ.

ಅಜ್ಮೀರ್ ದರ್ಗಾ ತಳಪಾಯದಲ್ಲಿ ದೇವಾಲಯ ಇದೆ ಎಂದು ಹಿಂದೂ ಸಂಘಟನೆಯೊಂದು ಇತ್ತೀಚಿಗೆ ಕೋರ್ಟ್ ಮೊರೆ ಹೋಗಿತ್ತು. ಇದು ವಿವಾದಕ್ಕೂ ಕಾರಣವಾಗಿತ್ತು. ಆದರೆ, ಸುಪ್ರೀಂ ಕೋರ್ಟ್ ಈ ರೀತಿಯ ಎಲ್ಲ ಅರ್ಜಿಗಳ ವಿಚಾರಣೆಗೆ ತಡೆ ಹಾಕಿದೆ.

## ನಗರದಲ್ಲಿ ಇಂದು ಪ್ರಿಯಾಂಕ್ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ರಾಜ್ಯದಲ್ಲಿ ನಡೆಯುತ್ತಿರುವ ಬಾಣಂತಿಯರ ಸಾವು ಖಂಡಿಸಿ ಮತ್ತು ಗುತ್ತಿಗೆದಾರ ಸಚಿನ್ ಆತ್ಮಹತ್ಯೆಗೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ, ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಇಂದು ಬೆಳಿಗ್ಗೆ 11.30ಕ್ಕೆ ಬಿಜೆಪಿ ಕಾರ್ಯಾಲಯದಿಂದ ಉಪ ವಿಭಾಗಾಧಿಕಾರಿಗಳ ಕಚೇರಿವರೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

# ಜಮೀನಿನಲ್ಲಿ ರೈತ ಮಹಿಳೆಯ ಮೇಲೆ ಕರಡಿ ದಾಳಿ

ಹೊನ್ನಾಳಿ, ಜ. 3 - ತಾಲ್ಲೂಕಿನ ಚಿಕ್ಕಬಾಸೂರು ತಾಂಡಾದ ರೈತ ಮಹಿಳೆ ಸುಮಾರು 60 ವರ್ಷದ ರುದ್ರಿಬಾಯಿ ಅವರು ತಮ್ಮ ಜಮೀನಿನಲ್ಲಿ ಬುಧವಾರ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕರಡಿಯು ಏಕಾಏಕಿ ದಾಳಿ ಮಾಡಿ ತೀವ್ರತರನಾಗಿ ಗಾಯಗೊಳಿಸಿದ್ದು ಹಲ್ಲೆಗೊಳಗಾದ ಮಹಿಳೆಯನ್ನು ರುದ್ರಿಬಾಯಿಯ ಕುಟುಂಬಸ್ಥರು ಸಂಜೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲು ಮಾಡಿದ್ದರು.



**ಘಟನೆಯ ವಿವರ :** ತಮ್ಮ ಗ್ರಾಮದಿಂದ 2 ಕಿ.ಮೀ. ದೂರವಿರುವ ತಮ್ಮ ಸ್ವಂತ ಜಮೀನಿನಲ್ಲಿ ಅವರೆಕಾಯಿ ಬೆಳೆದಿದ್ದು, ಅದನ್ನು ಕೀಳಲು ರುದ್ರಿಬಾಯಿ ಅವರು ಬುಧವಾರ ಬೆಳಿಗ್ಗೆ ಒಬ್ಬರೇ ಹೊಲಕ್ಕೆ ಹೋಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಮಧ್ಯಾಹ್ನ 3 ಗಂಟೆಯ ವೇಳೆಗೆ ಕರಡಿಯು ರುದ್ರಿಬಾಯಿಯ ಮೇಲೆ ದಾಳಿ ಮಾಡಿ ಎಡಗೈಗೆ 7 ಬಾರಿ ಉಗುರಿನಿಂದ ತೆರಚಿದ್ದಲ್ಲದೇ ಸೊಂಟಕ್ಕೆ ಬಾಯಿಯಿಂದ ಕಚ್ಚಿ ತೀವ್ರತರನಾಗಿ ಗಾಯಗೊಳಿಸಿತ್ತು. ಮಹಿಳೆಯು ಜೋರಾಗಿ ಕೂಗಿ ಕೊಂಡರೂ ಅಕ್ಕ-ಪಕ್ಕದ ಜಮೀನಿನಲ್ಲಿ ಯಾರೂ ಇರದ ಕಾರಣ ಸ್ವಯಂ ರಕ್ಷಣೆಗೆ ಹೋರಾಡಿದ್ದಾರೆ. ನಂತರ ಕರಡಿಯು ತೀವ್ರತರನಾಗಿ ಗಾಯಗೊಳಿಸಿ ಹೊರಟು ಹೋದ ನಂತರ ರಕ್ತದ ಮಡುವಿನಲ್ಲಿ ಬಿದ್ದಿದ್ದ ರುದ್ರಿಬಾಯಿ ಅವರು ತಮ್ಮ ಮನೆ ತಲುಪಿದ್ದಾರೆ. ಇವರ ಪರಿಸ್ಥಿತಿಯನ್ನು ಗಮನಿಸಿದ ಕುಟುಂಬಸ್ಥರು ತಕ್ಷಣವೇ ಇವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿಸಿದ್ದಾರೆ.

ಮಹಿಳೆಯ ಮೇಲೆ ಕರಡಿ ದಾಳಿ ಮಾಡಿರುವ ಮಾಹಿತಿ ತಿಳಿದ ಶಾಂತಿಸಾಗರ ವಲಯದ ಮಾವಿನಕಟ್ಟೆಯ ಅರಣ್ಯಾಧಿಕಾರಿ ಎಂ.ಉಮಾ, ಉಪವಲಯ ಅರಣ್ಯಾಧಿಕಾರಿ ಮೈಲಾರಪ್ಪ, ಸಿಬ್ಬಂದಿ ಮಿರ್ಜಾ ಮತ್ತು ಮುಸ್ತಾಕ್ ಅಹ್ಮದ್ ತಂಡದವರ ಜೊತೆಗೆ ಗುರುವಾರ ಬೆಳಿಗ್ಗೆ ಮಹಿಳೆಯು ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಸಾಂತ್ವನ ಹೇಳಿದರು.

ಅರಣ್ಯಾಧಿಕಾರಿ ಎಂ.ಉಮಾ ಅವರು ಕರಡಿಯಿಂದ ದಾಳಿಗೊಳಗಾಗಿರುವ ಮಹಿಳೆಗೆ ಸರ್ಕಾರದಿಂದ ದಯಾತ್ಮಕ ಪರಿಹಾರವನ್ನು ದೊರಕಿಸಿಕೊಡಲು ಕ್ರಮ ಜರುಗಿಸಲಾಗುವುದು ಎಂದು ಪತ್ರಿಕೆಗೆ ಮಾಹಿತಿ ನೀಡಿದರು.

**ಕರಡಿ ಹಿಡಿಯಲು ಒತ್ತಾಯ:** ತಕ್ಷಣವೇ ಶಾಸಕ ಡಿ.ಜಿ.ಶಾಂತನಗೌಡ ಅವರು ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಅರಣ್ಯಾಧಿಕಾರಿಗಳು ಕರಡಿ ಸೆರೆ ಹಿಡಿಯುವಂತೆ ಕ್ರಮ ಜರುಗಿಸಬೇಕೆಂದು ಈ ಭಾಗದ ರೈತರು-ಸಾರ್ವಜನಿಕರು ಒತ್ತಾಯಿಸಿದ್ದಾರೆ.

**ಹೊನ್ನಾಳಿ : ತಕ್ಷಣವೇ ಕರಡಿ ಸೆರೆ ಹಿಡಿಯುವಂತೆ ರೈತರ ಒತ್ತಾಯ**

## ಮಗುವಿಗೆ ನಾಯಿ ಕಡಿತ : ಪಾಲಿಕೆ ವಿರುದ್ಧ ಮೊಕದ್ದಮೆ



ದಾವಣಗೆರೆ, ಜ.3- ಮಗುವಿಗೆ ನಾಯಿ ಕಚ್ಚಿರುವುದರಿಂದ ಮಹಾನಗರ ಪಾಲಿಕೆ ಮತ್ತು ಪ್ರಾಣಿದಯಾ ಸಂಘಗಳ ವಿರುದ್ಧ ಕೆ.ಟಿ.ಜೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಕೀಲ ಅನಿಸ್ ಪಾಷಾ ಅವರ ತಮ್ಮನ ಮಗನಾದ ಲುಕ್ಮಾನ್ (12) ನಾಯಿ ಕಡಿತಕ್ಕೆ ಒಳಗಾಗಿದ್ದಾನೆ. ಈತನು ನ.12ರ ರಾತ್ರಿ 8.30ರ ವೇಳೆ ಭಗತ್ ಸಿಂಗ್ ನಗರದ 12ನೇ ಕ್ರಾಸ್‌ನಲ್ಲಿ ತನ್ನ ಸ್ನೇಹಿತನ ಮನೆಗೆ ಹೋಗುವಾಗ ಬೀದಿ ನಾಯಿಗಳು ಈತನ ಮೇಲೆ ದಾಳಿ ಮಾಡಿ ಕೈ-ಕಾಲುಗಳಿಗೆ ಕಚ್ಚಿವೆ.

ನಗರದಲ್ಲಿ ಬೀದಿ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ಮಕ್ಕಳು ಹಾಗೂ ವಯಸ್ಕರು ಹಗಲು ವೇಳೆಯೇ ಓಡಾಡುವುದು ಕಷ್ಟಕರವಾಗಿದೆ. ಈ ಹಿಂದೆಯೂ ಬಹಳಷ್ಟು ಜನರಿಗೆ ಬೀದಿ ನಾಯಿಗಳು ಕಚ್ಚಿ ಗಾಯಗೊಳಿಸಿವೆ ಎಂದು ವಕೀಲ ಅನಿಸ್ ಪಾಷಾ ತಿಳಿಸಿದ್ದಾರೆ.

ಈ ಬಗ್ಗೆ ಹಲವಾರು ಬಾರಿ ಪಾಲಿಕೆಗೆ ಮನವಿ ಮಾಡಿಕೊಂಡಿದ್ದರೂ ಬೀದಿ ನಾಯಿ ನಿಯಂತ್ರಿಸಲು ನಿರ್ಲಕ್ಷ್ಯವಹಿಸಿದ್ದಾರೆ. ಆದ್ದರಿಂದ ಡಿ.14ರಂದು ಪಾಲಿಕೆ ಮತ್ತು ಪ್ರಾಣಿ ದಯಾ ಸಂಘಗಳ ವಿರುದ್ಧ ದೂರು ದಾಖಲಿಸಿದ್ದೇನೆ. ಇದಕ್ಕೂ ಕ್ರಮ ಕೈಗೊಳ್ಳದಿದ್ದರೆ ದಂಡ ಹಾಗೂ ಪರಿಹಾರ ನೀಡುವಂತೆ ಪಾಲಿಕೆ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲಾಗುವುದು ಎಂದು ವಕೀಲರು ಎಚ್ಚರಿಕೆ ನೀಡಿದ್ದಾರೆ.


## ರಸ್ತೆ ಅಪಘಾತದಲ್ಲಿ ಓರ್ವನ ಸಾವು

ದಾವಣಗೆರೆ, ಜ.3- ಇವಲ್ಲಿನ ತರಳಬಾಳು ಬಡಾವಣೆಯ ಎಂ.ಬಿ. ವಿನಯ್ (58) ಮೊನ್ನೆ ನಿಧನರಾದರು. ರಾಷ್ಟ್ರೀಯ ಹೆದ್ದಾರಿ ಬಳಿಯ ಶಾಮನೂರು ಚೌಲ್ಟ್ರಿ ಎದುರು ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಅವರಿಗೆ ತಾಯಿ, ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ನಿನ್ನೆ ಸಂಜೆ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.



ವಿನಯ್, ಅವರು ಮೂಲತಃ ಸಿವಿಲ್ ಇಂಜಿನಿಯರ್ ಆಗಿದ್ದರು. ಶ್ರೀ ಚೌಡೇಶ್ವರಿ ದೇವಸ್ಥಾನದ ಮುಖ್ಯ ಖಜಾಂಚಿಯೂ ಆಗಿದ್ದರು.

# ಐಶ್ವರ್ಯ ಗೌಡ ಪ್ರಕರಣದಲ್ಲಿ ನಿಖಿಲ್, ಅನಿತಾ ಹೆಸರು : ಕುಮಾರ ಸ್ವಾಮಿ ಗರಂ



ಬೆಂಗಳೂರು, ಜ. 3- ಐಶ್ವರ್ಯ ಗೌಡ ಎನ್ನುವ ಮಹಿಳೆ ಯಾವಾಗ, ಎಲ್ಲಿ ನಿಖಿಲ್ ಕುಮಾರಸ್ವಾಮಿ ಮತ್ತು ಅನಿತಾ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದಾರೆಂಬ ಮಾಹಿತಿ ಕೊಟ್ಟರೆ ಒಳಿತು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐಶ್ವರ್ಯ ಗೌಡ ಮೊಕದ್ದಮೆಗಳಲ್ಲಿ ನಿಖಿಲ್, ಅನಿತಾ ಕುಮಾರಸ್ವಾಮಿ ಹೆಸರುಗಳು ಪ್ರಸ್ತಾಪವಾಗಿವೆ, ಇದರ ಹಿಂದೆ ಯಾರ ಕೈಗಳಿವೆ ಎನ್ನುವುದು ಗೊತ್ತಾಗುತ್ತದೆ, ಚಿನ್ನ, ಬೆಳ್ಳಿ ಮೊಕದ್ದಮೆಗಳಲ್ಲಿ ಅವರ ಹೆಸರುಗಳನ್ನು ಎಳೆದು ತರಲಾಗುತ್ತಿದೆ ಎಂದರು.

ಈ ಸರ್ಕಾರದಲ್ಲಿ ಎಷ್ಟರ ಮಟ್ಟಿಗೆ ತನಿಖೆ ನಡೆಯುತ್ತಿದೆ ಎನ್ನುವುದೂ ಗೊತ್ತಿದೆ, ಮಾಧ್ಯಮಗಳಲ್ಲಿ ಈ ವಿಷಯ ಪ್ರಸ್ತಾಪವಾದ ಮೇಲೆ ಮಾಹಿತಿ ಪಡೆದುಕೊಂಡು ಮೊಕದ್ದಮೆಗಳ ಹಿನ್ನೆಲೆ ತಿಳಿದುಕೊಂಡಿದ್ದೇನೆ.

ಘಟನೆ ನಡೆದಿದ್ದು 2016-2019ರಲ್ಲಿ, ದೂರು ಸ್ವೀಕರಿಸಿರುವುದು ಈಗ, ರಾಜ್ಯ ಸರ್ಕಾರ ಯಾರನ್ನು, ಯಾವಾಗ, ಏನು ಬೇಕಾದರೂ ಮಾಡುತ್ತದೆ, ಅಧಿಕಾರ ವರ್ಗವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ ಎನ್ನುವುದು ಗೊತ್ತಿದೆ. ಪ್ರಕರಣ 2016ರಲ್ಲಿ ನಡೆದಿದೆ ಎಂಬುದಾಗಿ 2024ರಲ್ಲಿ ದೂರು ಕೊಡುತ್ತಾರೆ, 2018ರಲ್ಲಿ ನಾನೇ ಮುಖ್ಯಮಂತ್ರಿ ಆಗಿದ್ದೆ, ಆಗ ಏಕೆ ನನ್ನ ಬಳಿ ದೂರುದಾರರು ಬರಲಿಲ್ಲ, ಪೊಲೀಸರಿಗೆ ಏಕೆ ದೂರು ನೀಡಲಿಲ್ಲ ಎಂದು ಪ್ರಶ್ನಿಸಿದರು.

ನಿಖಿಲ್ ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ, ಇವರ ಮುಖಗಳನ್ನೇ ನೋಡಿಲ್ಲ, ಹೇಗೆ ಅವರ ಪರಿಚಯ ಆಯಿತು, ಇದರ ಹಿಂದೆ ಯಾರಿದ್ದಾರೆ, ನನ್ನ ಮಗ, ಪತ್ನಿಯನ್ನು ಏಕೆ ಈ ಪ್ರಕರಣದಲ್ಲಿ ಎಳೆದು ತಂದಿದ್ದೀರಿ, ಇದನ್ನು ಸರ್ಕಾರ ಎಂದು ಕರೆಯಲು ಸಾಧ್ಯವೇ ಎಂದರು.

ಸದ್ಯಕ್ಕೆ ನಾನು ಯಾವುದಕ್ಕೂ ಟೀಕೆ ಮಾಡುವುದಿಲ್ಲ, ಟೀಕೆ ಮಾಡಿ ಏನ್ ಮಾಡೋದು, ಕೇಳೋಕೆ ಯಾರ್ ಇದ್ದಾರೆ ಇಲ್ಲಿ, ರಾಜ್ಯದಲ್ಲಿ ಸರ್ಕಾರವೇ ಇಲ್ಲ, ಸ್ವೇಚ್ಛಾಚಾರವಾಗಿ ಆಡಳಿತ ನಡೆಸುತ್ತಿದ್ದಾರೆ, ಇವರಿಗೆ ಹೇಳೋರು ಕೇಳೋರು ಯಾರೂ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾನು ಯಾರಿಗೂ ದೂಷಣೆ ಮಾಡಲ್ಲ, ಎಲ್ಲವನ್ನು ಕಾಲವೇ ನಿರ್ಣಯ ಮಾಡುತ್ತದೆ, ನಮ್ಮ ಕಾಲವೂ ಬರುತ್ತದೆ, ಇಡೀ ವ್ಯವಸ್ಥೆಯನ್ನು ಬಹಳ ಕೆಳಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಎಷ್ಟು ಆತ್ಮಹತ್ಯೆಗಳು ನಡೆದವು, ಏಕೆ ಇಷ್ಟು ಆತ್ಮಹತ್ಯೆಗಳು ಆಗುತ್ತಿವೆ, ಜೀವ ಕಳೆದುಕೊಂಡ ನತದೃಷ್ಟರ ಮರಣ ಪತ್ರದಲ್ಲಿ ಏನೆಲ್ಲಾ ಬರೆಯುತ್ತಿದ್ದಾರೆ, ಯಾರ ಯಾರ ಹೆಸರುಗಳನ್ನು ಉಲ್ಲೇಖ ಮಾಡುತ್ತಿದ್ದಾರೆ, ಮಂತ್ರಿಗಳ ಮೇಲೆ ಆರೋಪ ಬಂದರೂ ಸತ್ಯಾಂಶ ಹೊರಗೆ ಬರುತ್ತಿಲ್ಲ.

ಅವನ್ಯಾರೋ ರಮೇಶ್ ಗೌಡ, ಅಲ್ಲೆಲ್ಲೋ ಊಟಕ್ಕೆ ಕೂತಿದ್ದನಂತೆ, ಕುಮಾರಸ್ವಾಮಿಗೆ ಫೋನ್ ಮಾಡಿಕೊಟ್ಟನಂತೆ, ಕುಮಾರಸ್ವಾಮಿ 50 ಕೋಟಿ ಕೇಳಿದ್ದಂತೆ, ಅದಕ್ಕೊಂದು ಕುಮಾರಸ್ವಾಮಿ ಮೇಲೆ ಕಂಪ್ಲೇಂಟ್, ಇದರಲ್ಲಿ ಅರ್ಥ ಏನಿದೆ, ಸಂಕ್ರಾಂತಿ ಕಳೆಯಲಿ, ಎಲ್ಲಾ ವಿಷಯಗಳ ಬಗ್ಗೆ ಮಾತನಾಡುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷ 'ಆಪರೇಷನ್ ಹಸ್ತದ ದುಷ್ಟಯತ್ನ ಮಾಡುತ್ತಿದೆ, ಅದು ವರ್ಕ್ ಆಗುವುದಿಲ್ಲ, ಜೆಡಿಎಸ್ ಮುಗಿಸಬೇಕು, 12 ಶಾಸಕರನ್ನು ಕರೆದುಕೊಂಡು ಬನ್ನಿ, 13 ಜನರನ್ನು ಕರೆದುಕೊಂಡು ಬನ್ನಿ ಎನ್ನುವ ಷಡ್ಯಂತ್ರ ನಡೆಯುತ್ತಿದೆ, ಇದೆಲ್ಲವೂ ನನಗೆ ಗೊತ್ತಿದೆ, ನಮ್ಮ ಯಾವ ಶಾಸಕರೂ ಪಕ್ಷ ಬಿಟ್ಟು ಹೋಗುವ ಪರಿಸ್ಥಿತಿ ಇಲ್ಲ, ಕಾಂಗ್ರೆಸ್‌ನವರು ಏನೇನು ಮಾಡುತ್ತಿದ್ದಾರೆ ಎನ್ನುವುದು ಗೊತ್ತಿದೆ, ಕಾಂಗ್ರೆಸ್ಸಿನವರ ಪಾಪದ ಕೊಡ ತುಂಬಿದೆ, ದೇವರೇ ಅವರಿಗೆ ಶಿಕ್ಷೆ ಕೊಡುತ್ತಾನೆ.

ಸಂಕ್ರಾಂತಿ ನಂತರ ರಾಜ್ಯ ರಾಜಕೀಯದಲ್ಲಿ ಕ್ರಾಂತಿ, ವಾಂತಿ ಬಗ್ಗೆ ನಾನು ಹೇಳೋದಿಲ್ಲ, ಎಲ್ಲವನ್ನೂ ಈಗಾಗಲೇ ನೋಡಿಯಾಗಿದೆ, ನಾನು ಇದ್ಯಾವುದರ ಬಗ್ಗೆಯೂ ಮಾತನಾಡುವುದಿಲ್ಲ.

ಕಾಂಗ್ರೆಸ್ ಶಾಸಕರಿಗೆ ನಾನು ಮನವಿ ಮಾಡುವುದು ಇಷ್ಟೇ, ನಿಮ್ಮೆಲ್ಲರಿಗೂ ಆತ್ಮಸಾಕ್ಷಿ ಎನ್ನುವುದಿದ್ದರೆ, ನಿಮ್ಮ ಪಕ್ಷದ ಸರ್ಕಾರ ಹೋಗುತ್ತಿರುವ ಮಾರ್ಗ ಏನು, ಜನರಿಗೆ ನೀವೆಲ್ಲಾ ಏನು ಮಾತು ಕೊಟ್ಟು ಬಂದಿದ್ದೀರಿ, ಆ ಬಗ್ಗೆ ಯೋಚನೆ ಮಾಡಿ ಎಂದರು.

ನಿಮ್ಮ ಗ್ಯಾರಂಟಿಗಳು ಹಳ್ಳ ಹಿಡಿದು ಹೋಗಿವೆ, ಗ್ಯಾರಂಟಿ ಕೊಡುವುದಕ್ಕೆ ಪೈಪೋಟಿ ನಡೆಯುತ್ತಿದೆ, ಇಂತಹ ಗ್ಯಾರಂಟಿ ಕೊಟ್ಟಿದ್ದ ಹಿಮಾಚಲ ಪ್ರದೇಶ ಇವತ್ತು ಏನಾಗಿದೆ, ಕಾಂಗ್ರೆಸ್ ಶಾಸಕರು, ಮಂತ್ರಿಗಳು ನಿಮ್ಮ ಆತ್ಮಕ್ಕೆ ಪ್ರಶ್ನೆ ಹಾಕಿಕೊಳ್ಳಿ, ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಗಮನಿಸಿ, ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂಬುದನ್ನು ನೋಡಿ. ನಮ್ಮ ಶಾಸಕರ ಬಗ್ಗೆ ನಮಗೆ ಆತಂಕ ಇಲ್ಲ, ಕಾಂಗ್ರೆಸ್ ಏನೆಲ್ಲಾ ಮಾಡುತ್ತಿದೆ ಎಂಬುದನ್ನು ನಮ್ಮ ಶಾಸಕರು ನನಗೆ ಹೇಳುತ್ತಿದ್ದಾರೆ, ನಮ್ಮ ಪಕ್ಷವನ್ನು ಭದ್ರ ಮಾಡಿಕೊಳ್ಳುವುದು ಹೇಗೆ ಎನ್ನುವುದು ಗೊತ್ತಿದೆ ಎಂದರು.

## ಲಾರೆನ್ಸ್ ಬಿಷ್ಣೋಯಿ ಸಂದರ್ಶನ : ಪಂಜಾಬ್‌ನ ಡಿಎಸ್ಪಿ ಹಂತದ ಅಧಿಕಾರಿ ವಜಾ

ಚಂಡಿಘಡ, ಜ. 3- ಪೊಲೀಸ್ ಕಸ್ಟಡಿಯಲ್ಲಿದ್ದಾಗ ಭೂಗತ ಲಾರೆನ್ಸ್ ಬಿಷ್ಣೋಯಿ ಸಂದರ್ಶನಕ್ಕೆ ಅವಕಾಶ ನೀಡಿದ ಆರೋಪದ ಮೇಲೆ ಡಿಎಸ್ಪಿ ಹಂತದ ಅಧಿಕಾರಿಯೊಬ್ಬರನ್ನು ಪಂಜಾಬ್ ಸರ್ಕಾರ ವಜಾಗೊಳಿಸಿದೆ.ಸಂವಿಧಾನದ 311ನೇ ವಿಧಿ ಬಳಸಿ ಡಿಎಸ್ಪಿ ಗುರ್ಷೇರ್ ಸಿಂಗ್ ಸಂಧು ಅವರನ್ನು ವಜಾಗೊಳಿಸಲಾಗಿದೆ. 2023ರ ಮಾರ್ಚ್‌ನಲ್ಲಿ ಖಾಸಗಿ ಸುದ್ದಿ ಸಂಸ್ಥೆಯೊಂದು ಬಿಷ್ಣೋಯಿಯ ಎರಡು ಸಂದರ್ಶನಗಳನ್ನು ಪ್ರಸಾರ ಮಾಡಿತ್ತು.

# ಜನವರಿಯಲ್ಲೇ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲು ಉತ್ತರಾಖಂಡ ಧಾವಂತ

ಡೆಹ್ರಾಡೂನ್, ಜ. 3 - ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ನಿಗದಿಪಡಿಸಿರುವ ಜನವರಿ ತಿಂಗಳ ಗಡುವಿನ ಒಳಗೆ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲು ಉತ್ತರಾಖಂಡ ರಾಜ್ಯ ಆಡಳಿತ ಧಾವಂತ ಹೊಂದಿದೆ.

2025ರಲ್ಲಿ ಉತ್ತರಾಖಂಡ ರಾಜ್ಯ ರಚನೆಯಾಗಿ ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿದೆ. ಇದು ದೊಡ್ಡ ಸಾಧನೆಯ ವರ್ಷವಾಗಲಿದೆ. ನಾವು ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಭರವಸೆ ನೀಡಿದ್ದೆವು. ಇದನ್ನು ಜನವರಿಯಲ್ಲಿ ಜಾರಿಗೆ ತರಲಿದ್ದೇವೆ ಎಂದು ಧಾಮಿ ಹೊಸ ವರ್ಷಾಚರಣೆ ಸಂದರ್ಭದಲ್ಲಿ ತಿಳಿಸಿದ್ದರು.

ಯಾವ ದಿನದಂದು ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಾಗುವುದು ಎಂಬುದನ್ನು ಘೋಷಿಸಿಲ್ಲ. ಆದರೆ ಗಣರಾಜ್ಯೋತ್ಸವ ದಿನದಂದು ಜಾರಿಗೆ ಬರಲಿದೆ ಎನ್ನಲಾಗುತ್ತಿದೆ.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿದಂತೆ ಮಾಜಿ ಮುಖ್ಯ ಕಾರ್ಯದರ್ಶಿ ಶತ್ರುಘ್ನ ಸಿಂಗ್ ಅವರ ನೇತೃತ್ವದ ಪರಿಣಿತರ ಸಮಿತಿ ತನ್ನ ಅಂತಿಮ ವರದಿಯನ್ನು ರಾಜ್ಯ ಸರ್ಕಾರಕ್ಕೆ 2024ರ ಅಕ್ಟೋಬರ್‌ನಲ್ಲಿ ಸಲ್ಲಿಸಿತ್ತು. ಇದನ್ನು ಜಾರಿಗೆ ತರುವ ಹೊಣೆಯನ್ನು ಗೃಹ ಇಲಾಖೆಗೆ ವಹಿಸಲಾಗಿದೆ.

ಏಕರೂಪ ನಾಗರಿಕ ಸಂಹಿತೆಯ ಕಾಯ್ದೆ ಹಾಗೂ ಅದನ್ನು ಜಾರಿಗೆ ತರುವ ಕುರಿತು ಇಲಾಖೆಗಳ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ.

ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ. ಡೂನ್ ವಿಶ್ವವಿದ್ಯಾಲಯದ ಉಪ ಕುಲಪತಿ ಸುರೇಖಾ ದಂಗ್ವಾಲ್ ಅವರು ತರಬೇತಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.

ಕಾಯ್ದೆಯ ಅಂಶಗಳನ್ನು ಜನರಿಗೆ ತಿಳಿಸಲು ಪೋರ್ಟಲ್ ಒಂದನ್ನು ರೂಪಿಸಲಾಗಿದೆ. ಮದುವೆ ಇಲ್ಲವೇ ಲಿವ್ ಇನ್ ಸಂಬಂಧಗಳಲ್ಲಿ ಇರುವವರು ಮನೆಯಿಂದಲೇ ನೋಂದಾಯಿಸಿಕೊಳ್ಳಲು ಆಪ್ ಒಂದನ್ನು ರೂಪಿಸಲಾಗಿದೆ ಎಂದು ಸುರೇಖಾ ತಿಳಿಸಿದ್ದಾರೆ. ಏಕರೂಪ ನಾಗರಿಕ ಸಂಹಿತೆಯ ಅನ್ವಯ ಮದವೆ ಹಾಗೂ ಲಿವ್ ಇನ್ ಸಂಬಂಧಗಳ ನೋಂದಣಿ ಕಡ್ಡಾಯವಾಗಿದೆ. ಜನರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ನೋಂದಣಿ ಪ್ರಕ್ರಿಯೆ ಸರಳಗೊಳಿಸಲಾಗಿದೆ ಎಂದವರು ಹೇಳಿದ್ದಾರೆ.

ಏಕರೂಪ ನಾಗರಿಕ ಸಂಹಿತೆ ಜಾರಿಯು ಬಿಜೆಪಿಯ ಪ್ರಮುಖ ಅಜೆಂಡಾಗಳಲ್ಲಿ ಒಂದಾಗಿದೆ. ಆದರೆ ಕಳೆದ ಲೋಕಸಭಾ ಚುನಾವಣೆ ನಂತರ ಈ ಯೋಜನೆ ಜಾರಿಗೆ ತರುವಲ್ಲಿ ಉತ್ತರಾಖಂಡ ಸರ್ಕಾರ ಮುಂಚೂಣಿಯಲ್ಲಿದೆ.

ಮದುವೆ, ವಿಚ್ಛೇದನ ಹಾಗೂ ಉತ್ತರಾಧಿತ್ವ ಸೇರಿದಂತೆ ಹಲವು ಅಂಶಗಳಿಗೆ ಏಕರೂಪ ನಾಗರಿಕ ಸಂಹಿತೆ ರೂಪಿಸಲಾಗಿದೆ. ಧರ್ಮಭೇದವಿಲ್ಲದೆ ಇದು ಎಲ್ಲರಿಗೂ ಅನ್ವಯವಾಗಲಿದೆ. ಆದರೆ ಬುಡಕಟ್ಟು ಜನರನ್ನು ಕಾಯ್ದೆ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಅಸ್ಸಾಂ ಸೇರಿದಂತೆ ಬಿಜೆಪಿ ಆಡಳಿತದ ಹಲವು ರಾಜ್ಯಗಳು ಏಕರೂಪ ನಾಗರಿಕ ಸಂಹಿತೆ ಜಾರಿಗೆ ಒಲವು ತೋರಿವೆ. ಉತ್ತರಾಖಂಡದ ರೀತಿಯಲ್ಲೇ ಬಿಜೆಪಿ ಆಡಳಿತದ ಪ್ರತಿಯೊಂದು ರಾಜ್ಯವು ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಸಂಸತ್ತಿನಲ್ಲಿ ತಿಳಿಸಿದ್ದರು.

# ಜಗಳೂರಿನಲ್ಲಿ ಇಂದು ಜೆ.ಎಂ. ಇಮಾಂ ಸ್ಮಾರಕ ರಾಜ್ಯ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ

ದಾವಣಗೆರೆ, ಜ..3- ಜೆ.ಎಂ.ಇಮಾಂ ಟ್ರಸ್ಟ್ ಜಗಳೂರು, ಜೆ.ಎಂ. ಇಮಾಂ ಸ್ಮಾರಕ ಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಜೆ.ಎಂ.ಇಮಾಂ ಸ್ಮಾರಕ 6 ನೇ ವರ್ಷದ ರಾಜ್ಯ ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ನಾಳೆ ದಿನಾಂಕ 4 ರ ಶನಿವಾರ ಸಂಜೆ 4 ಗಂಟೆಗೆ ಜೆ.ಎಂ. ಇಮಾಂ ಶಾಲೆಯ ಆವರಣದಲ್ಲಿರುವ ಜಗಳೂರಿನ ಸಂತ ಶಿಶುನಾಳ ಷರೀಫ್ ಸಾಹೇಬ್ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರಶಸ್ತಿ ಸಲಹಾ ಸಮಿತಿ ಅಧ್ಯಕ್ಷ ಎನ್.ಟಿ. ಯರ್ರಿಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಸಮಾರಂಭ ಉದ್ಘಾಟಿಸಲಿದ್ದು, ಟ್ರಸ್ಟ್ ಗೌರವಾಧ್ಯಕ್ಷ ಜೆ.ಕೆ.ಹುಸೇನ್ ಮಿಯಾಸಾಬ್ ಅಧ್ಯಕ್ಷತೆ ವಹಿಸಲಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಕ್ಷರ ಸಂತ ಹರೇಕಳ ಹಾಜಬ್ಬ ಅವರಿಗೆ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ 50 ಸಾವಿರ ರೂ. ನಗದು, ಪ್ರಶಸ್ತಿ, ಸ್ಮರಣಿಕೆಯನ್ನು ಹೊಂದಿರುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಬಿ.



ದೇವೇಂದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಈ. ಹಾಲಮೂರ್ತಿ, ರಾಜ್ಯ ಪಿಂಜಾರ್ (ನದಾಪ್)ಸಂಘದ ಜಗಳೂರು ಅಧ್ಯಕ್ಷ ಜಲೀಲ್ ಸಾಬ್, ಉದ್ಯಮಿ ಹೆಚ್.ಇ. ದಾದಾ ಖಲಂದರ್, ಜೆ.ಎಂ. ಇಮಾಂ ಟ್ರಸ್ಟ್ ಅಧ್ಯಕ್ಷ ಎಸ್.ಹೆಚ್. ಮಸ್ತಾನ್ ಸಾಬ್, ಖಜಾಂಚಿ ಜೆ.ಕೆ. ಮಹಮ್ಮದ್ ಷರೀಫ್ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಸ್. ಹಾಲಪ್ಪ, ಆರ್ ಖಾಸೀಂಸಾಬ್, ದಾದಾಪೀರ್ ನವಿಲೇಹಾಳ್ ಉಪಸ್ಥಿತರಿದ್ದರು.

# ಶಿಕ್ಷಣದಿಂದ ಮಾತ್ರ ಶೋಷಿತ ಸಮುದಾಯಗಳ ಮುನ್ನಲೆ



### ಜಗಳೂರಿನ ಶಾಸಕ ದೇವೇಂದ್ರಪ್ಪ ಅಭಿಮತ

ಜಗಳೂರು, ಜ. 3 - ಶಿಕ್ಷಣದಿಂದ ಮಾತ್ರ ಶೋಷಿತ ಸಮುದಾಯಗಳು ಮುಖ್ಯ ವಾಹಿನಿಗೆ ಬರಲು ಸಾಧ್ಯ ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು. ಪಟ್ಟಣದ ಅಂಬೇಡ್ಕರ್ ವೃತ್ತದ ಬಳಿ ಆಯೋಜಿಸಲಾಗಿದ್ದ 207ನೇ ಭೀಮಾ ಕೊರೆಗಾಂವ್ ವಿಜಯೋತ್ಸವದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನುವಾದ ಶೂದ್ರಾತಿ ಶೂದ್ರರನ್ನು ತಲೆ ತಗ್ಗಿಸುವಂತೆ ಮಾಡಿತ್ತು. ಆದರೆ ದುಂಡು ಮೇಜಿನ ಸಮ್ಮೇಳನದಲ್ಲಿ ಅಂಬೇಡ್ಕರ್ ಅವರು ಬಿಟ್ಟ ಬಾಣ ಶೂದ್ರಾತಿ ಶೂದ್ರರನ್ನು ತಲೆ ಎತ್ತುವಂತೆ ಮಾಡಿತು. ಸಂವಿಧಾನವೇ ಶ್ರೇಷ್ಠ ಗ್ರಂಥವಾಗಿದೆ. ಕೇವಲ ಮೀಸಲಾತಿಗಾಗಿ ಭಿಕ್ಷಾಪಾತ್ರೆ ಹಿಡಿದು ಹೋರಾಟ ನಡೆಸುವ ಮೇಲ್ವರ್ಗದವರು ಅಂಬೇಡ್ಕರ್ ಅವರನ್ನು ಸ್ಮರಿಸಬೇಕಿದೆ ಎಂದು ಹೇಳಿದರು.

ಅಂಬೇಡ್ಕರ್ ಕೊಟ್ಟ ಸಂವಿಧಾನ ಬದ್ದ ಎಸ್‌ಟಿ ಮೀಸಲಾತಿಯಿಂದ ನನ್ನ ಪುತ್ರ ಉನ್ನತ ಮಟ್ಟದ ಅಧಿಕಾರಿಯಾಗಿದ್ದು. ನಾನು ಶಾಸಕನಾಗಿ ಆಯ್ಕೆಯಾಗಿರುವೆ ಎಂದು ಸಂತಸ ವ್ಯಕ್ತಪಡಿಸಿದರು. ಕೆಪಿಸಿಸಿ ಎಸ್‌ಟಿ ಘಟಕದ ಮಾಜಿ ಅಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಸಂವಿಧಾನದ ಉಳಿವಿಗಾಗಿ ಶೋಷಿತ ಸಮುದಾಯದ ಯುವಕರು ಪಕ್ಷಾತೀತ, ಜಾತ್ಯತೀತವಾಗಿ ಜಾಗೃತರಾಗಬೇಕಿದೆ. ದಲಿತ ಸಂಘಟನೆಗಳು ಪಕ್ಷ, ಜಾತಿಗಳಿಂದ ಛಿದ್ರ ಛಿದ್ರವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ, ನಿವೃತ್ತ ಡಿವೈಎಸ್‌ಪಿ ಪ್ರಹ್ಲಾದ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಮಾರಣ್ಣ, ವಕೀಲರ ಸಂಘದ ತಾಲ್ಲೂಕು ಅಧ್ಯಕ್ಷ ಬಸವರಾಜ್ ಮರೇನಹಳ್ಳಿ, ಪ.ಪಂ. ಸದಸ್ಯ ತಾನಾಜಿ ಗೋಸಾಯಿ, ಕುರಿ ಜಯ್ಯಣ್ಣ, ನಾಯಕ ಸಮಾಜದ ತಾಲ್ಲೂಕು ಕಾರ್ಯದರ್ಶಿ ತಿಪ್ಪೇಸ್ವಾಮಿ, ವಕೀಲ ಸಣ್ಣ ಓಬಯ್ಯ, ಆರ್. ಓಬಳೇಶ್, ಮುಖಂಡರಾದ ಸಿ. ತಿಪ್ಪೇಸ್ವಾಮಿ, ಪೂಜಾರ್ ಸಿದ್ದಪ್ಪ, ಕುಬೇಂದ್ರಪ್ಪ, ಸತೀಶ್ ಮಲೆಮಾಚಿಕೆರೆ, ಧನ್ಯಕುಮಾರ್ ಎಚ್.ಎಂ ಹೊಳೆ, ರಾಜಪ್ಪ ವ್ಯಾಸಗೊಂಡನಹಳ್ಳಿ, ಮಾದಿಹಳ್ಳಿ ಮಂಜಪ್ಪ, ಓಬಣ್ಣ, ಸತ್ಯಮೂರ್ತಿ ಇದ್ದರು

# ಕಬಡ್ಡಿ ಜಿಲ್ಲಾ ತಂಡಕ್ಕೆ ಸಮವಸ್ತ್ರ ವಿತರಣೆ, ಬೀಳ್ಕೊಡುಗೆ

ದಾವಣಗೆರೆ, ಜ. 3 - ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಕೋಲಾರದಲ್ಲಿ ನಡೆಯುವ ಕರ್ನಾಟಕ ಕಬಡ್ಡಿ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸುವ ಬಾಲಕ ಮತ್ತು ಬಾಲಕಿಯರ ತಂಡದ ಸದಸ್ಯರಿಗೆ ಸಮವಸ್ತ್ರ ವಿತರಿಸಿ ಬೀಳ್ಕೊಡುಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಮವಸ್ತ್ರ ವಿತರಿಸಿ ಮಾತನಾಡಿದ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು, ಜಿಲ್ಲೆಯ ಪ್ರತಿಯೊಂದು ಕ್ಷೇತ್ರಕ್ಕೂ ಶಾಮನೂರು ಮನೆತನ ತಮ್ಮದೇ ಆದ ಕೊಡುಗೆ ನೀಡಿದ್ದು, ಪ್ರತಿಯೊಂದು ಜಾತಿ, ಧರ್ಮಕ್ಕೂ ಸಮಾನ ಅವಕಾಶ ಕಲ್ಪಿಸಿದ ಕೀರ್ತಿ ಸಲ್ಲುತ್ತದೆ ಎಂದರು.

ಈ ಹಿಂದೆ ಎಸ್.ಎಸ್. ಆಸ್ಪತ್ರೆ ಪ್ರಾರಂಭದ ವೇಳೆ ನೂರಾರು ಕ್ರೀಡಾ ಪಟುಗಳಿಗೆ ಜಾತಿ, ಧರ್ಮ, ನೋಡದೇ ಕೆಲಸ ನೀಡಲಾಯಿತು. ಮಲ್ಲಿಕಾರ್ಜುನ್ ಅವರು ಕ್ರೀಡಾ ಸಚಿವರಾದ ವೇಳೆ ಕ್ರೀಡಾ ಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು ಎಂದು ತಿಳಿಸಿದರು.

ಕರ್ನಾಟಕ ಕಬಡ್ಡಿ ಅಸೋಸಿಯೇಷನ್ ಜಿಲ್ಲಾ ಸಂಘದ ಅಧ್ಯಕ್ಷ ಎಂ. ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ನಾರಾಯಣಸ್ವಾಮಿ, ಕ್ರೀಡಾ ಪ್ರೋತ್ಸಾಹಕ ಮುಸ್ತಾಫ್, ಜಯ ಪ್ರಕಾಶ್ ಗೌಡ, ಅಸೋಸಿಯೇಷನ್‌ನ ಶಂಕರ್ ಗಣೇಶ್, ರಾಮಣ್ಣ, ಜಗದೀಶ್, ಎನ್. ನಾಗರಾಜ್, ರಮೇಶ್, ಪೊಲೀಸ್ ಅಜಯ್‌ಕುಮಾರ್, ಮುಖ್ಯ ಶಿಕ್ಷಕ ನಾಗರಾಜ್, ಮಾರಪ್ಪ, ಮುರುಗನ್, ಬಸವರಾಜ್ ವಾರ್ತಾ ಇಲಾಖೆ ಮತ್ತಿತರರಿದ್ದರು.



## ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಜ.3- ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನ್‌ಲೈನ್ https://shp.karnataka.gov.in ನಲ್ಲಿ ಇದೇ ದಿನಾಂಕ 10 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಸಾಮಾನ್ಯ ಪದವಿ ಮಟ್ಟದ ಕೋರ್ಸು, ವೃತ್ತಿಪರ ಕೋರ್ಸು ಮತ್ತು ಸ್ನಾತಕೋತ್ತರ ಕೋರ್ಸಿನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ದಾವಣಗೆರೆ ಕುಂದುವಾಡ ರಸ್ತೆ, ಶಿವಕುಮಾರ ಸ್ವಾಮಿ ಬಡಾವಣೆ, ಗುತ್ತೂರು ಕಾಲೋನಿ, ಹರಿಹರ, ಕೆರೆಬಿಳಚಿ, ಜಗಳೂರು ಟೌನ್, ಎಂ.ಸಿ,ಸಿ ಬಿ ಬ್ಲಾಕ್, ಕೆ.ಟಿ.ಜೆ ನಗರಗಳಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 08192-250022 ಹಾಗೂ ತಾಲ್ಲೂಕು ವಿಸ್ತರಣಾಧಿಕಾರಿಗಳ ಕಛೇರಿ ದೂರವಾಣಿ 08192-250066 ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

## ಇ.ಡಿ. ದರ್ಪದಿಂದ ವರ್ತಿಸಿದೆ ಹರಿಯಾಣ ಮಾಜಿ ಶಾಸಕರ ಬಂಧನ ಅಕ್ರಮ ಎಂದ ಸುಪ್ರೀಂ ಕೋರ್ಟ್

ನವದೆಹಲಿ, ಜ.3- ಜಾರಿ ನಿರ್ದೇಶನಾಲಯವು ಹರಿಯಾಣದ ಮಾಜಿ ಶಾಸಕ ಸುರೇಂದ್ರ ಪನ್ವರ್ ಅವರನ್ನು ಹದಿನೈದು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿ ಅಮಾನವೀಯವಾಗಿ ನಡೆಸಿಕೊಂಡಿದೆ ಹಾಗೂ ದರ್ಪದಿಂದ ವರ್ತಿಸಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಮಾಜಿ ಶಾಸಕರ ಬಂಧನ ಅಕ್ರಮ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಆಗಸ್ಟಿನ್ ಜಾರ್ಜ್ ಮಸಿಹ್ ಅವರನ್ನು ಒಳ ಗೊಂಡ ಪೀಠ ಈ ನಿಲುವು ತಳೆದಿದೆ. ಮಾಜಿ ಶಾಸಕ ಭಯೋತ್ಪಾದಕ ಚಟುವಟಿಕೆ ಪ್ರಕರಣವನ್ನೇನೂ ಎದುರಿ ಸುತ್ತಿರಲಿಲ್ಲ, ಅವರ ವಿರುದ್ಧ ಅಕ್ರಮ ಮರಳುಗಾರಿಕೆ ಆರೋಪವಷ್ಟೇ ಇತ್ತು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಇಂತಹ ಪ್ರಕರಣಗಳಲ್ಲಿ ಜನರ ಜೊತೆ ಈ ರೀತಿ ವರ್ತಿಸಬಾರದು. ಇದು ವ್ಯಕ್ತಿಯೊಬ್ಬರು ಹೇಳಿಕೆ ನೀಡಲು ಬಲವಂತ ಪಡಿಸಿದಂತೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮಾಜಿ ಶಾಸಕರ ಬಂಧನ ಅಕ್ರಮ ಎಂದು ಹೈಕೋರ್ಟ್ ತಿಳಿಸಿತ್ತು. ಈ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಜಾರಿ ನಿರ್ದೇಶನಾಲಯ ಅರ್ಜಿ ದಾಖಲಿಸಿತ್ತು. ಜಾರಿ ನಿರ್ದೇಶನಾಲಯದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

## ಆಸ್ಸಾಂನಲ್ಲಿ ರಾಷ್ಟ್ರೀಯ ಮಾರ್ಷಲ್ ಆರ್ಟ್ಸ್ ಸ್ಪರ್ಧೆ :

# ಈಗಲ್ ಫಿಟ್ನೆಸ್‌ಗೆ 15 ಚಿನ್ನ, 4 ಬೆಳ್ಳಿ, 9 ಕಂಚಿನ ಪದಕ




ದಾವಣಗೆರೆ, ಜ.3- ಕಳೆದ ಡಿಸೆಂಬರ್ 27, 28 ಮತ್ತು 29 ರಂದು ಅಸ್ಸಾಂನಲ್ಲಿ ನಡೆದ 6ನೇ ವಾರ್ಷಿಕ ರಾಷ್ಟ್ರೀಯ ಮಾರ್ಷಲ್ ಆರ್ಟ್ಸ್ ಸ್ಪರ್ಧೆಗಳಲ್ಲಿ ನಗರದ ಈಗಲ್ ಫಿಟ್‌ನೆಸ್‌ನ ಕ್ರೀಡಾಪಟುಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ 15 ಬಂಗಾರ, 4 ಬೆಳ್ಳಿ ಹಾಗೂ 9 ಕಂಚಿನ ಪದಕಗಳನ್ನು ಪಡೆದಿದ್ದಾರೆ.

ಮೋಯ್ ಥೈ ಕಿಕ್ ಬಾಕ್ಸಿಂಗ್ ಮತ್ತು ಕಿಯೋ ಕುಷಿನ್‌ನಲ್ಲಿ ವಿವಿಧ ಕೆಜಿ ವಿಭಾಗಗಳಲ್ಲಿ ಭಾಗವಹಿಸಿದ್ದ ಹರ್ಷಿತ್, ಸಮರ್ಥ ಎಸ್.ಹೆಚ್, ಸುಶೀಲ್ ರೆಡ್ಡಿ, ಪ್ರತೀಕ್ ಎಸ್.ವಿ, ಪ್ರಜ್ವಲ್ ಕೆ.ವಿ, ಶಿವಂ, ದೀಕ್ಷಿತ್, ಜಗದೀಶ್ ಮತ್ತು ಅರ್ಪಿತಾ ಹೆಚ್ ಅವರುಗಳು ಬಂಗಾರದ ಪದಕಗಳನ್ನು ಗಳಿಸಿದರೆ, ಅಕ್ಷಯ್ ಎಸ್.ಕೆ, ಚೇತನ್ ಎಸ್.ಪಿ, ದರ್ಶನ್ ಕೆ.ಎನ್ ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದಾರೆ.

ಕುಮಿಟೆಯಲ್ಲಿ ಪವನಿಕಾ, ಸಮರ್ಥ ಕುಮಾರ್ ಎಸ್, ಆರ್ಯನ್ ಎ, ವಿನಾಯಕ ಕೆ.ವಿ, ಪ್ರಣೀತ್ ಪಿ. ಪೂಜಾರ್ ಮತ್ತು ನಿಧಿ ಕೆ.ವಿ. ಬಂಗಾರದ ಪದಕಗಳನ್ನು ಹಾಗು ಪ್ರಣವ್ ಪಿ. ಪೂಜಾರ್ ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಕಟಾನಲ್ಲಿ ಪ್ರಣವ್ ಪಿ. ಪೂಜಾರ್ ಬೆಳ್ಳಿ ಪದಕ ಪಡೆದಿದ್ದಾರೆ. ಪವನಿಕಾ, ಹರ್ಷಿತ್, ಸಮರ್ಥ ಕುಮಾರ್ ಎಸ್, ಆರ್ಯನ್ ಎ, ಯೋಗೇಶ್, ವಿನಾಯಕ ಕೆ.ವಿ, ಪ್ರಣೀತ್ ಪಿ. ಪೂಜಾರ್, ನಿಧಿ ಕೆ.ವಿ ಕಂಚಿನ ಪದಕವನ್ನು ಪಡೆದಿದ್ದಾರೆ.

ಪದಕ ಸ್ವೀಕಾರ ಸಮಾರಂಭದಲ್ಲಿ ಈಗಲ್ ಫಿಟ್ನೆಸ್‌ನ ತರಬೇತುದಾರ ವೆಂಕ್ಸಿ ಸೆನ್ಸೈ ಸಹ ಉಪಸ್ಥಿತರಿದ್ದರು.


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ವಿ.ಎಸ್. ಜಯಪ್ರಕಾಶ್ ಬಿನ್ ಲೇಟ್ ವಿ. ಎಸ್. ಶಿವಾನಂದಪ್ಪ ಮತ್ತು ವಿ.ಎಸ್. ಚಂದ್ರಶೇಖರ್ ಬಿನ್ ವಿ. ಎಸ್. ಶಿವಾನಂದಪ್ಪ, ವೊಡ್ಡಿನಹಳ್ಳಿ ಗ್ರಾಮ, ತಾಲ್ಲೂಕು ದಾವಣಗೆರೆ ಇವರು ನೀಡಿದ ಮಾಹಿತಿ ಮತ್ತು ಅಧಿಕಾರದ ಮೇರೆಗೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ,

ನಮ್ಮ ಪಕ್ಷಗಾರರು ದಾವಣಗೆರೆ ನಗರದ ನಿಜಲಿಂಗಪ್ಪ ಬಡಾವಣೆ, ನ್ಯಾಷನಲ್ ಕಾನ್ವೆಂಟ್ ಸ್ಕೂಲ್ ಹತ್ತಿರ, ಡೋರ್ ನಂ.108, ದಾವಣಗೆರೆಯಲ್ಲಿ ವಾಸವಾಗಿರುವ ಬಿ.ಜಿ. ಅಜೇಯಕುಮರ್ ಬಿನ್ ಲೇಟ್ ಜಯ್ಯಣ್ಣ ಇವರೊಂದಿಗೆ ಅನುಸೂಚಿಯಲ್ಲಿರುವ ಆಸ್ತಿಗೆ ದಿನಾಂಕ: 14.10.2020 ರಂದು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು (ಜೆ.ವಿ) ಮಾಡಿಕೊಂಡಿರುತ್ತಾರೆ. ಸದರಿಯವರು ಕರಾರು ಪತ್ರ ಆದ ಮೇಲೆ ಭೂ ಪರಿವರ್ತನೆ ಮಾಡಿಸಿ, ನಿವೇಶನಗಳ ಅಭಿವೃದ್ಧಿ ಮಾಡುತ್ತೇನೆ ಎಂದು ಎಲ್ಲಾ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಸದರಿಯವರು ನಿವೇಶನಗಳ ಅಭಿವೃದ್ಧಿಯನ್ನು ಮಾಡದೇ ದಿನಗಳನ್ನು ತಳ್ಳಿದ್ದರಿಂದ, ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ರದ್ದು ಪಡಿಸಿದ ಬಗ್ಗೆ ದಿ: 28-11-2024 ರಂದು ಲೀಗಲ್ ನೋಟೀಸನ್ನು ನೀಡಿರುತ್ತಾರೆ. ಅದಕ್ಕೆ ಉತ್ತರವಾಗಿ ಅವರ ವಕೀಲರ ಮುಖಾಂತರ ದಿ: 19-12-2024 ರಂದು ಪ್ರತ್ಯುತ್ತರವನ್ನು ನೀಡಿರುತ್ತಾರೆ. ಸದರಿ ಅಜೇಯ್ ಕುಮರ್ ಇವರು ಮೌಖಿಕವಾಗಿ ಸದರಿ ಕರಾರು ಪತ್ರ ಆದ ನಂತರ ಯಾವುದೇ ನೋಂದಾಯಿತ ಪತ್ರ ಮಾಡುವುದು ಬೇಡ. ನನ್ನ ಅಧಿಕಾರವನ್ನು ಬಳಸಿ, ಈ ಪತ್ರದ ಮೇಲೇನೇ ನಿವೇಶನಗಳ ಅಭಿವೃದ್ಧಿ ಮಾಡುತ್ತೇನೆ ಎಂದು ತಿಳಿಸಿದ್ದರಿಂದ, ನಮ್ಮ ಕಕ್ಷಿದಾರರು ಹಲವಾರು ಸಲ ಕೇಳಿಕೊಂಡಾಗ್ಯೂ ಸಹ ಯಾವುದೇ ರೀತಿ ಸ್ಪಂದಿಸಿರುವುದಿಲ್ಲ. ಆದ್ದರಿಂದ ಈಗಾಗಲೇ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ರದ್ದು ಪಡಿಸಿದ್ದರ ಬಗ್ಗೆ ಲೀಗಲ್ ನೋಟೀಸ್ ನೀಡಿದ್ದು, ಸಾರ್ವಜನಿಕರು ಸದರಿಯವರ ಜೊತೆಗೆ ರೆವಿನ್ಯೂ ನಿವೇಶನಗಳು ಅಂತ ಅಥವಾ ಡೋರ್ ನಂಬರ್ ಮತ್ತು ಅಲಿನೇಶನ್ ಆಗಿದೆ ಅಂತ ಮಾರಾಟ ವಗೈರೆ ವ್ಯವಹಾರ ಮಾಡಬಾರದು. ಒಂದು ವೇಳೆ ಆ ರೀತಿ ಬಿ.ಜೆ. ಅಜೇಯ ಕುಮಾರ್ ಬಿನ್ ಲೇಟ್ ಜಯ್ಯಣ್ಣ ಇವರೊಡನೆ ಕ್ರಯ ವ್ಯವಹಾರ ಮಾಡಿದರೆ, ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲ. ಒಂದು ವೇಳೆ ಪರಭಾರೆ ವ್ಯವಹಾರ ಮಾಡಿದರೆ, ನೀವುಗಳೇ ಜವಾಬ್ದಾರರು ಅಂತ ನೀಡಿರುವ ಸಾರ್ವಜನಿಕ ಪ್ರಕಟಣೆ.

**ಅನುಸೂಚಿ ಆಸ್ತಿಗಳು:**

1) ದಾವಣಗೆರೆ ತಾ||, ಆನಗೋಡು ಹೋಬಳಿ ಹೆಚ್. ಕಲ್ಪನಹಳ್ಳಿ ಗ್ರಾಮದ, ರೀ ಸರ್ವೆ ನಂ. 53/2, ವಿಸ್ತೀರ್ಣ 1 ಎಕರೆ 6 ಗುಂಟೆ ಖುಷ್ಕಿ ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ ಸಣ್ಣಗೌಡ್ರ ಪರಮೇಶ್ವರಪ್ಪ ಇವರ ಜಾಮೀನು, ಪಶ್ಚಿಮಕ್ಕೆ ಪೂನಾ-ಬೆಂಗಳೂರು ರಸ್ತೆ, ಉತ್ತರಕ್ಕೆ ಕಲಪನಹಳ್ಳಿ ಗಡಿ, ದಕ್ಷಿಣಕ್ಕೆ ಚಂದ್ರಶೇಖರಪ್ಪ ಇವರ ಜಮೀನು.**

2) ದಾವಣಗೆರೆ ತಾ||, ಆನಗೋಡು ಹೋಬಳಿ, ವೊಡ್ಡಿನಹಳ್ಳಿ ಗ್ರಾಮದ ರೀ ಸರ್ವೆ ನಂ. 65/1 ಇದರಲ್ಲಿ ಖಾತೆ ನಂ.26 ರ ಪ್ರಕಾರ ನಮ್ಮಗಳ ಪೈಕಿ ವಿ.ಎಸ್. ಚಂದ್ರಶೇಖರ್ ಆದ ನನ್ನ ಹೆಸರಿನಲ್ಲಿ ಖಾತೆ ಇರತಕ್ಕ ಜಮೀನಿನ ವಿಸ್ತೀರ್ಣ ಎಕರೆ- 3 ಗುಂಟೆ 35 ಉಳ್ಳ ಖುಷ್ಕಿ ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ-ಪೂನಾ-ಬೆಂಗಳೂರು ರಸ್ತೆ, ಪಶ್ಚಿಮಕ್ಕೆ -ದಾರಿ, ಉತ್ತರಕ್ಕೆ-ಸುಶೀಲಮ್ಮ ಇವರ ಜಮೀನು, ದಕ್ಷಿಣಕ್ಕೆ- ಊರಿನ ದಾರಿ.**

**ಸಹಿ/- ಇಶ್ರತ್ ಬಾನು ಹೆಚ್.ಎನ್., ವಕೀಲರು**
**3ನೇ ಮೇನ್, 15ನೇ ಕ್ರಾಸ್, ವಿನೋಬನಗರ**
**ವಾರ್ಡ್ ನಂ. 23, ದಾವಣಗೆರೆ-4.**
**ಮೊ. : 63631 75269**

**ಸ್ಥಳ : ದಾವಣಗೆರೆ.**
**ದಿನಾಂಕ : 3/1/2025**



## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ ಶ್ರೀ ಲೋಕೇಶ್, ಕು ಶಿಲ್ಪಾ, ಶ್ರೀ ಹನುಮಂತಪ್ಪ ಮತ್ತು ಶ್ರೀ ಚಂದ್ರಪ್ಪ (ವಾದಿಗಳು/ಅಪೀಲುದಾರರು) ಇವರುಗಳು ಶಾರದಮ್ಮ, ಬಿ.ಎನ್. ಹನುಮಂತಪ್ಪ, ರಾಮಪ್ಪ, ಶಾರದಮ್ಮ ನಿಂಗಪ್ಪ, ರಾಮಚಂದ್ರ ರಾವ್ ಶಾನಬೋಗ್, ಕೆ. ಎಂ. ನಿಂಗಪ್ಪ, ಕೆ.ಸಿ. ತಿಮ್ಮರಾಜು, ಕೃಷ್ಣಪ್ಪ, ಬಸಪ್ಪ, ಹನುಮಂತಪ್ಪ, ಸಿದ್ದಪ್ಪ, ಚನ್ನಪ್ಪ, ನಾಗಪ್ಪ, ಹನುಮಂತಪ್ಪ, ನರಸಿಂಹಪ್ಪ, ಐ. ರಾಜಶೇಖರಪ್ಪ, ಐ. ಬಸವರಾಜಪ್ಪ, ಐ.ರುದ್ರಪ್ಪ, ಐ. ಪ್ರಭಾಕರ್ (ಪೌತಿ) ಇವರ ಪತ್ನಿ ಶ್ರೀಮತಿ ಬಸಮ್ಮ (ಪ್ರತಿವಾದಿಗಳು/ಎದುರುದಾರರು) ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಅಸಲು ದಾವೆ ಸಂಖ್ಯೆ:98/2012, ಅಸಲು ದಾವೆ ಸಂ:144/2011 ಮತ್ತು ಸಿವಿಲ್, ಮಿಸ್‌ಲೇನಿಯಸ್ ಸಂ:9/2012 ಗಳ ಪ್ರಕರಣಗಳನ್ನು ಸಲ್ಲಿಸಿದ್ದು ಇರುತ್ತದೆ. ಇವುಗಳು ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ (ಹಿ.ವಿ) ದಾವಣಗೆರೆ ಇಲ್ಲಿ. ಸದರಿ ಪ್ರಕರಣಗಳು ಪ್ರಸ್ತುತ ಈಗ ಇತ್ಯರ್ಥಗೊಂಡು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ದಾವಣಗೆರೆ ಇಲ್ಲಿ ಅಪೀಲು ಸಂಖ್ಯೆ ಆರ್.ಎ.80/2018, ಅಲ್ಲದೆ ಅಮಲ್ಜಾರಿ ನಂ.15/2023 ಕೂಡ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ದಾವಣಗೆರೆಯಲ್ಲಿ ಚಾಲ್ತಿಯಲ್ಲಿದ್ದು, ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಪ್ರತಿವಾದಿಯರು/ಎದುರುದಾರರು ಮೇಲಿನ ಪ್ರಕರಣಗಳನ್ನು ಮರೆಮಾಚಿ ಸಾರ್ವಜನಿಕರಿಗೆ ಮಾರಲು ಪ್ರಯತ್ನಿಸಿದ್ದು, ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಎಚ್ಚರಿಕೆ ನೀಡಲಾಗುತ್ತಿದೆ. ಮತ್ತು ಯಾವುದೇ ರೀತಿಯ ವ್ಯಾಪಾರ, ವಹಿವಾಟು, ಪರಭಾರೆಗಳಲ್ಲಿ ತೊಡಗಬಾರದೆಂದು ಮತ್ತು ಈ ಕೆಳಗಿನ ಸ್ವತ್ತಿನ ರಾಜಸ್ವ ದಾಖಲೆಗಳನ್ನು ಮಾರ್ಪಾಡು ಮಾಡುವ ಕಾರ್ಯಚಟುವಟಿಕೆಗಳಲ್ಲೂ ಸಹ ತೊಡಗಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಆದಾಗ್ಯೂ ಸಾರ್ವಜನಿಕರು ಮಾರಾಟ ಪ್ರಕ್ರಿಯೆಯಲ್ಲಿ ಅಥವಾ ಇತರೆ ವ್ಯಾಪಾರ-ವ್ಯವಹಾರ ಮತ್ತು ರಾಜಸ್ವ ದಾಖಲೆಗಳ ಬದಲಾವಣೆಯ ಚಟುವಟಿಕೆಗಳಲ್ಲಿ ತೊಡಗಿದರೆ ಅಂತವರು ಕಾನೂನಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮತ್ತು ಅಂತವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು. ಇದರ ಬಗ್ಗೆ ನಾವು ಅಂದರೆ ಮೇಲೆ ತಿಳಿಸಿದ ಅಪೀಲುದಾರರು ದಿನಾಂಕ:17.12.2024 ರಂದು ಇದೇ ಪತ್ರಿಕೆಯಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ನೀಡಿದ್ದು ಇರುತ್ತದೆ, ಆದರೆ ಅದಕ್ಕೆ ಸುಳ್ಳು ಮರು ಉತ್ತರವನ್ನು ಎದರುದಾರರು ದಿನಾಂಕ:25.12.2024 ರಂದು ಇದೇ ಪತ್ರಿಕೆಯಲ್ಲಿ ನೀಡಿರುತ್ತಾರೆ, ಒಟ್ಟಿಗೆ ಹೇಳುವುದಾದರೇ ಇದು ಒಂದು ವಿವಾದಾಸ್ಪದ ಜಮೀನು ಎಂದು ಮತ್ತು ಈ ಜಮೀನಿನ ಮೇಲೆ ಹಲವಾರು ಪ್ರಕರಣಗಳು ಇದೇ ಎಂಬುದು ಖಚಿತವಾಗಿರುತ್ತದೆ, ಆದ್ದರಿಂದ ಸಾರ್ವಜನಿಕರು ಈ ಕೆಳಗಿನ ಜಮೀನನ್ನು ಖರೀದಿ ಮಾಡಬಾರದೆಂದು, ಇದರ ಬಗ್ಗೆ ಯಾವುದೇ ರೀತಿಯ ಮೋಸದ ವ್ಯವಹಾರಗಳನ್ನು ಮತ್ತು ಮಾಡಬಾರದೆಂದು, ಅಕ್ರಮ ಲೇಔಟ್‌ಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಿದೆ, ಆದ್ಯಾಗೂ ಯಾರಾದರು ಅಕ್ರಮ, ಕಾನೂನುಬಾಹಿರವಾಗಿ, ಈ ಕೆಳಗಿನ ಜಮೀನಿನ ಬಗ್ಗೆ ಮಾಡಿದ್ದೇ ಆದರೆ ಅವರ ಮೇಲೆ ಪೊಲೀಸ್ ಕೇಸನ್ನು ಕೊಡಲಾಗುವುದು, ಮತ್ತು ಅಂತವರ ಮೇಲೆ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ಮಾಡಲಾಗುವುದು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಸಾರ್ವಜನಿಕರು, ಬಿಲ್ಡರ್‌ಗಳು ಎಚ್ಚೆತ್ತುಕೊಳ್ಳಬೇಕು ಎಂದು ಈ ಮೂಲಕ ತಿಳಿಯಪಡಿಸಲಾಗಿದೆ. ಈ ಜಮೀನಿನ ಒಂದು ಭಾಗವನ್ನು ಇತ್ತೀಚಿಗೆ ಪಿ.ಸಿ ಚಂದನ್ ಬಿನ್ ಶಿವಾನಂದಪ್ಪ ಪಿ.ಕೆ., ದಾವಣಗೆರೆ ಇವರು ಖರೀದಿ ಮಾಡಿದ್ದರು. ಅವರ ಕ್ರಯಪತ್ರವನ್ನು 'ಈಗಾಗಲೇ ನ್ಯಾಯಾಲಯದಲ್ಲಿ ಹಾಜರು ಮಾಡಲಾಗಿದೆ, ಅವರನ್ನು ಸದರಿ ಈ ಮೇಅನ ಅಪೀಲು ನಂ.80/2018 ರಲ್ಲಿ ಸೇರಿಸಲು ಅರ್ಜಿಯನ್ನು ಅಪೀಲುದಾರರು ಸಲ್ಲಿಸಿದ್ದು ಇರುತ್ತದೆ, ಸದರಿ ಕೇಸು ಇದೇ ತಿಂಗಳ 8.1.2025 ರಂದು, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ ಇಲ್ಲಿ ಇರುತ್ತದೆ, ಸಾರ್ವಜನಿಕರು ಇದರ ಬಗ್ಗೆ ಪರೀಶೀಲಿಸಬಹುದೆಂದು ಈ ಮೂಲಕ ಅಪೀಲುದಾರರು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಿರುತ್ತಾರೆ, ಇದರ ಬಗ್ಗೆ ಅಪೀಲುದಾರರು ಸೂಕ್ತ ಅರ್ಜಿಯನ್ನು, ದಾವಣಗೆರೆಯ ತಹಶೀಲ್ದಾರರಿಗೆ, ನೋಂದಣಿ ಅಧಿಕಾರಿಗಳಗೆ, ಜಿಲ್ಲಾಧಿಕಾರಿಗಳಗೆ, ದೂಡಾದವರಿಗೆ, ಪಿಡಬ್ಲ್ಯೂಡಿ ಇಲಾಖೆಗೆ, ಮಹಾನಗರ ಪಾಲಿಕೆಗೆ ನೀಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರುತ್ತಾರೆ. ಈಗಾಗಲೇ ತಹಶೀಲ್ದಾರರಿಗೆ ಮತ್ತು ನೋಂದಣಿ ಅಧಿಕಾರಿಗಳಿಗೆ ಸೂಕ್ತ ಅರ್ಜಿಯನ್ನು ಅಪೀಲುದಾರರು ನೀಡಿರುತ್ತಾರೆ, ಈ ಸಾರ್ವಜನಿಕ ಪ್ರಕಟಣೆಯು ಈ ಮೇಲಿನ ಅಧಿಕಾರಿಗಳಗೂ ಅನ್ವಹಿಸುತ್ತದೆಂದು ಈ ಮೂಲಕ ತಿಳಿಯತಕ್ಕದ್ದು.

**ಅನುಸೂಚಿ** : ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕಿನಲ್ಲಿರುವ ಸರ್ವೆ ನಂ.159, ವಿಸ್ತೀರ್ಣ 12 ಎಕರೆ 3 ಗುಂಟೆಗಳು, ಆಕಾರ ರೂ.4=00 ಇದಕ್ಕೆ ಚಕ್ಕುಬಂದಿ ಪೂರ್ವಕ್ಕೆ ಚನ್ನಗಿರಿ ರಂಗಪ್ಪನವರ ಜಮೀನು, ಪಶ್ಚಿಮಕ್ಕೆ: ನಿಟುವಳ್ಳಿ ಭೀಮಪ್ಪ ಮತ್ತು ಬೆಳ್ಳೂಡಿ ಮಹಾದೇವಪ್ಪನವರ ಜಮೀನು, ಉತ್ತರಕ್ಕೆ: ಕಾಯಕದ ಮಹೇಶಪ್ಪ ಮತ್ತು ಷಡಕ್ಷಪ್ಪಯ್ಯನವರ ಜಮೀನು, ದಕ್ಷಿಣಕ್ಕೆ: ಹಳೇ ಚಾನಲ್‌ನ ಏರಿ ಮತ್ತು ಮಾರಾಟಗಾರರಿಗೆ ಸಂಬಂಧಿಸಿದ ಜಮೀನು.

**ಸಹಿ/- ಚಂದ್ರಪ್ಪ**
**ದಿನಾಂಕ : 3.1.2025**
**ಮೇಲ್ಮನವಿದಾರರು**
**ಫೋ. : 99014 20688**

**ಸಹಿ/- ಅಜಯ್. ಸಿ**
**ಮೇಲ್ಮನವಿದಾರರ ಪರ ವಕೀಲರು,**
**KAR-3475/2006, #867/1B, ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್ ಪಕ್ಕ, ಮಹೇಶ್ ಕಾಂಪ್ಲೆಕ್ಸ್, 1ನೇ ಮಹಡಿ, ಪಿ.ಬಿ. ರೋಡ್, ದಾವಣಗೆರೆ-6. (ಮೊ. : 9743019896)**

# ಮನಮೋಹನ್ ಸಿಂಗ್ ದೂರದೃಷ್ಟಿಯ ನಾಯಕ ಮತ್ತು ಶಿಕ್ಷಣಕ್ಕೆ ಅವರ ಕೊಡುಗೆ ಅಪಾರ

ಭಾರತದ 14ನೇ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ತಮ್ಮ ಅತ್ಯುನ್ನತ ಬುದ್ಧಿಶಕ್ತಿ, ಆರ್ಥಿಕ ಸುಧಾರಣೆಗಳು ಮತ್ತು ಶಾಂತ ಮತ್ತು ದೃಢವಾದ ನಾಯಕತ್ವಕ್ಕಾಗಿ ಜಾಗತಿಕವಾಗಿ ಪ್ರಸಿದ್ಧರಾಗಿದ್ದಾರೆ. ಭಾರತದ ಆರ್ಥಿಕ ಉದಾರೀಕರಣದಲ್ಲಿ ಅವರ ಪ್ರಸಿದ್ಧ ಪಾತ್ರವನ್ನು ಮೀರಿ, ಶಿಕ್ಷಣ ಕ್ಷೇತ್ರದಲ್ಲಿ ಡಾ. ಸಿಂಗ್ ಅವರ ಪ್ರಯತ್ನಗಳು ಅಭಿನಂದನಾರ್ಹವಾಗಿದೆ, ಇವರಲ್ಲಿ ಶಿಕ್ಷಣವು ರಾಷ್ಟ್ರೀಯ ಅಭಿವೃದ್ಧಿಯ ಮೂಲಾಧಾರವಾಗಿದೆ ಎಂಬ ಅವರ ಆಳವಾದ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಸೆಪ್ಟೆಂಬರ್ 26, 1932 ರಂದು ಗಾಹ್‌ನಲ್ಲಿ (ಈಗ ಪಾಕಿಸ್ತಾನದಲ್ಲಿದೆ) ಜನಿಸಿದ ಡಾ. ಸಿಂಗ್ ಅವರ ಸಾಧಾರಣ ಆರಂಭದಿಂದ ಜಾಗತಿಕ ರಾಜಕಾರಣಿಯಾಗುವವರೆಗಿನ ಪ್ರಯಾಣವು ಶಿಕ್ಷಣದ ಶಕ್ತಿಯನ್ನು ಉದಾಹರಿಸುತ್ತದೆ. ಪಂಜಾಬ್ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಗೌರವ ಪದವಿ, ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಅಧ್ಯಯನಗಳು ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಿಂದ ಡಿ.ಫಿಲ್ ಅನ್ನು ಒಳಗೊಂಡಿರುವ ಶೈಕ್ಷಣಿಕ ರುಜುವಾತುಗಳೊಂದಿಗೆ, ಡಾ. ಸಿಂಗ್ ಅವರ ಶೈಕ್ಷಣಿಕ ಪ್ರಯಾಣವು ಶಿಕ್ಷಣದ ಪರಿವರ್ತಕ ಸಾಮರ್ಥ್ಯದಲ್ಲಿ ಅವರ ನಂಬಿಕೆಗೆ ಸಾಕ್ಷಿಯಾಗಿದೆ.

ಡಾ. ಸಿಂಗ್ ಅವರ ವ್ಯಾಪಕವಾದ ಶೈಕ್ಷಣಿಕ ಹಿನ್ನೆಲೆಯು ಅವರ ವಿಶ್ವ ದೃಷ್ಟಿಕೋನವನ್ನು ರೂಪಿಸಿತು ಮಾತ್ರವಲ್ಲದೆ, ಭಾರತದ ಶೈಕ್ಷಣಿಕ ವ್ಯವಸ್ಥೆಗೆ ಅವರ ದೃಷ್ಟಿಕೋನವನ್ನು ಪ್ರೇರೇಪಿಸಿತು. ಹಣಕಾಸು ಸಚಿವರಾಗಿ (1991-1996) ಮತ್ತು ಪ್ರಧಾನ ಮಂತ್ರಿಯಾಗಿ (2004-2014) ಅವರ ನೀತಿಗಳು, ಶಿಕ್ಷಣವು ವ್ಯಕ್ತಿಗಳನ್ನು ಸಬಲೀಕರಣಗೊಳಿಸಲು, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸಲು ಪ್ರಮುಖವಾಗಿದೆ ಎಂಬ ಅವರ ದೃಢತೆಯನ್ನು ಪ್ರತಿಬಿಂಬಿಸುತ್ತದೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವ ಗುರಿಯನ್ನು ಹೊಂದಿದ್ದ ಸರ್ವ ಶಿಕ್ಷಾ ಅಭಿಯಾನದ (SSA) ವಿಸ್ತರಣೆಯು ಅವರ ಅಧಿಕಾರಾವಧಿಯಲ್ಲಿ ಅತ್ಯಂತ ಮಹತ್ವದ ಮೈಲಿಗಲ್ಲುಗಳಲ್ಲಿ ಒಂದಾಗಿದೆ. ಅವರು 2009 ರ ಶಿಕ್ಷಣ ಹಕ್ಕು (RTE) ಕಾಯಿದೆಯ ಮೂಲಕ ಈ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದರು, 6 ರಿಂದ 14 ವರ್ಷ ವಯಸ್ಸಿನ ಪ್ರತಿ ಮಗುವಿಗೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಮಾಡಿದರು. ಈ ಉಪಕ್ರಮಗಳು ಮೂಲಭೂತ ಸೌಕರ್ಯವನ್ನು ಸುಧಾರಿಸಿತು, ಹೆಚ್ಚಿದ ದಾಖಲಾತಿ ಮತ್ತು ಡ್ರಾಪ್‌ಔಟ್ ದರಗಳನ್ನು ಕಡಿಮೆಗೊಳಿಸಿತು, ವಿಶೇಷವಾಗಿ ಅಂಚಿನಲ್ಲಿರುವ ಸಮುದಾಯಗಳಲ್ಲಿ.

ಡಾ. ಸಿಂಗ್ ಅವರ ಸರ್ಕಾರವು ವಿಶ್ವದ ಅತಿದೊಡ್ಡ ಶಾಲಾ ಆಹಾರ ಕಾರ್ಯಕ್ರಮವಾದ ಮಧ್ಯಾಹ್ನದ ಊಟ ಯೋಜನೆಯನ್ನು ವಿಸ್ತರಿಸುವ ಮೂಲಕ ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಪೌಷ್ಟಿಕತೆಯ ಮಹತ್ವವನ್ನು ಒತ್ತಿಹೇಳಿತು. ಈ ಉಪಕ್ರಮವು ಅಪೌಷ್ಟಿಕತೆಯನ್ನು ನಿಭಾಯಿಸಲು ಮಾತ್ರವಲ್ಲದೆ ಶಾಲಾ ಹಾಜರಾತಿಯನ್ನು ಗಮನಾರ್ಹವಾಗಿ ಹೆಚ್ಚಿಸಿತು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ. ಉನ್ನತ ಶಿಕ್ಷಣದ ಕ್ಷೇತ್ರದಲ್ಲಿ, ಅವರ



ನಾಯಕತ್ವವು ಹೊಸ ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (IITಗಳು), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (IIMಗಳು), ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್ (IISERಗಳು) ನಂತಹ ಪ್ರಮುಖ ಸಂಸ್ಥೆಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಪ್ರಯತ್ನಗಳು ವಿಜ್ಞಾನ, ತಂತ್ರಜ್ಞಾನ ಮತ್ತು ನಿರ್ವಹಣಾ ಶಿಕ್ಷಣದಲ್ಲಿ ಭಾರತದ ಜಾಗತಿಕ ಖ್ಯಾತಿಯನ್ನು ಹೆಚ್ಚಿಸಿತು, ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಿತು.

2005 ರಲ್ಲಿ ರಾಷ್ಟ್ರೀಯ ಜ್ಞಾನ ಆಯೋಗದ (NKC) ಸ್ಥಾಪನೆಯು ಅವರ ನೇತೃತ್ವದ ಮತ್ತೊಂದು ಹೆಗ್ಗುರುತು ಮತ್ತು ಸಾಂಸ್ಥಿಕ ಆಡಳಿತವನ್ನು ಸುಧಾರಿಸುವುದು. ಹೆಚ್ಚುವರಿಯಾಗಿ, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆಯಲ್ಲಿ ಕೌಶಲ್ಯಪೂರ್ಣ ಕಾರ್ಮಿಕರ ಪ್ರಾಮುಖ್ಯತೆಯನ್ನು ಗುರುತಿಸಿ, ಡಾ. ಸಿಂಗ್ ಅವರ ಸರ್ಕಾರ 2009 ರಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಿಷನ್ ಪ್ರಾರಂಭಿಸಿತು, ಲಕ್ಷಾಂತರ ಯುವ ಭಾರತೀಯರನ್ನು ಉದ್ಯೋಗ-ಸಿದ್ಧ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸಿತು.

ಒಳಗೊಳ್ಳುವಿಕೆ ಡಾ. ಸಿಂಗ್ ಅವರ ಶೈಕ್ಷಣಿಕ ದೃಷ್ಟಿಯ ತಿರುಳಾಗಿತ್ತು. ಅವರ ಸರ್ಕಾರವು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರಲ್ಲಿ ಉನ್ನತ ಶಿಕ್ಷಣವನ್ನು ಉತ್ತೇಜಿಸಲು ವಿದ್ಯಾರ್ಥಿವೇತನ ಮತ್ತು ಹಣಕಾಸಿನ ನೆರವು ಕಾರ್ಯಕ್ರಮಗಳನ್ನು ಪರಿಚಯಿಸಿತು, ಲಿಂಗ ಮತ್ತು ಸಾಮಾಜಿಕ ಅಸಮಾನತೆಗಳನ್ನು ಗಣನೀಯವಾಗಿ ಕಡಿಮೆ ಮಾಡಿತು. ಅವರು ಯುನೈಟೆಡ್ ಸ್ಟೇಟ್ಸ್ ಮತ್ತು ಯುನೈಟೆಡ್ ಕಿಂಗ್‌ಡಮ್‌ನಂತಹ ದೇಶಗಳೊಂದಿಗೆ ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ಶಿಕ್ಷಣದಲ್ಲಿ ಅಂತರರಾಷ್ಟ್ರೀಯ ಸಹಯೋಗವನ್ನು ಬೆಳೆಸಿದರು, ಸಂಶೋಧನಾ ಪಾಲುದಾರಿಕೆ ಮತ್ತು ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳನ್ನು ಹೆಚ್ಚಿಸಿದರು.

ಡಾ. ಸಿಂಗ್ ಅವರ ಕೊಡುಗೆಗಳು ಶಿಕ್ಷಣ ತಜ್ಞರ ಆರ್ಥಿಕ ಯೋಗಕ್ಷೇಮವನ್ನು ಸುಧಾರಿಸಲು ವಿಸ್ತರಿಸಿದೆ. ಅವರ ನಾಯಕತ್ವದಲ್ಲಿ, 6 ನೇ ಯುಜಿಸಿ ವೇತನ (UGC 6th Pay) ಆಯೋಗದ ಅನುಷ್ಠಾನವು ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಕರ ವೇತನ ಶ್ರೇಣಿಗಳಲ್ಲಿ ಗಣನೀಯ ಹೆಚ್ಚಳವನ್ನು ತಂದಿತು. ರಾಷ್ಟ್ರದ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಣ ತಜ್ಞರ ಪ್ರಮುಖ ಪಾತ್ರವನ್ನು ಗುರುತಿಸುವಲ್ಲಿ ಈ ಕ್ರಮವು ಮಹತ್ವದ ಹೆಜ್ಜೆಯಾಗಿದೆ. ಉತ್ತಮ ಸಂಭಾವನೆ ಮತ್ತು ಪ್ರೋತ್ಸಾಹವನ್ನು ನೀಡುವ ಮೂಲಕ, ಅವರ ಸರ್ಕಾರವು ಭಾರತದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಖಾತ್ರಿಪಡಿಸುವ ಮೂಲಕ ಶಿಕ್ಷಕ ವೃತ್ತಿಯಲ್ಲಿ ಪ್ರತಿಭಾವಂತ ವ್ಯಕ್ತಿಗಳನ್ನು ಆಕರ್ಷಿಸಲು, ಮತ್ತು ಉಳಿಸಿಕೊಳ್ಳಲು ಪ್ರಯತ್ನಿಸಿತು.

ಶಿಕ್ಷಣದಲ್ಲಿ ಡಾ. ಸಿಂಗ್ ಅವರ ಪರಂಪರೆ ನಿರಂತರ ಮತ್ತು ಬಹುಮುಖಿಯಾಗಿದೆ. ಅವರ ನೀತಿಗಳು ಜಾಗತಿಕ ಜ್ಞಾನದ ಕೇಂದ್ರವಾಗಲು ಭಾರತದ ಆಕಾಂಕ್ಷೆಗಳಿಗೆ ದೃಢವಾದ ಅಡಿಪಾಯವನ್ನು ಹಾಕಿದವು. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದರಿಂದ ಹಿಡಿದು ಉನ್ನತ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸುವುದು ಮತ್ತು ಶಿಕ್ಷಣ ತಜ್ಞರ ಆರ್ಥಿಕ ಭದ್ರತೆಯನ್ನು ಖಾತ್ರಿಪಡಿಸುವುದು, ಅವರ ದೃಷ್ಟಿ ದೇಶದ ಶೈಕ್ಷಣಿಕ ಭೂದೃಶ್ಯವನ್ನು ರೂಪಿಸುವುದನ್ನು ಮುಂದುವರೆಸಿದೆ. ನಾಯಕ, ಅರ್ಥಶಾಸ್ತ್ರಜ್ಞ ಮತ್ತು ಶೈಕ್ಷಣಿಕವಾಗಿ, ಡಾ. ಸಿಂಗ್ ಅವರ ಜೀವನ ಮತ್ತು ಕೆಲಸವು ಶಿಕ್ಷಣದ ಪರಿವರ್ತಕ ಶಕ್ತಿಯನ್ನು ಒತ್ತಿಹೇಳುತ್ತದೆ ಮತ್ತು ಹೆಚ್ಚು ಅಂತರ್ಗತ, ಸಮಾನ ಮತ್ತು ಪ್ರಬುದ್ಧ ಸಮಾಜವನ್ನು ನಿರ್ಮಿಸುವಲ್ಲಿ ಅದರ ನಿರ್ಣಾಯಕ ಪಾತ್ರವನ್ನು ಒತ್ತಿಹೇಳುತ್ತದೆ.

**- ಡಾ.ಕೌಶಿಕ್ ಎಂ.ಸಿ.**, ಸಹಾಯಕ ಪ್ರಾಧ್ಯಾಪಕರು,
ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.
9886701926

## ಶಿಕ್ಷಕ ಬಿ. ರೇವಣಸಿದ್ದಪ್ಪರಗೆ ಸೇವಾ ನಿವೃತ್ತಿ : ಬೀಳ್ಕೊಡುಗೆ



ದಾವಣಗೆರೆ, ಜ.3- ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ದೇವರಾಜ್ ಅರಸು ವಿದ್ಯಾಸಂಸ್ಥೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಬಿ. ರೇವಣಸಿದ್ದಪ್ಪ ಅವರು ಸೇವಾ ನಿವೃತ್ತಿ ಹೊಂದಿದ್ದರ ಪ್ರಯುಕ್ತ ಅವರಿಗೆ ಸಡಗರ, ಸಂಭ್ರಮದಿಂದ ಬೀಳ್ಕೊಡುಗೆ ನೀಡಲಾಯಿತು.

ಈ ವೇಳೆ ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಅವರು, ಈ ಶಾಲೆಯ ಮಣ್ಣಿನ ಋಣವನ್ನು ನನ್ನ ಕೊನೆಯ ಉಸಿರು ಇರುವವರೆಗೂ ಮರೆಯುವುದಿಲ್ಲ ಎಂದು ಭಾವುಕರಾದರು.

ಸಂಸ್ಥೆಯ ಸಿಬ್ಬಂದಿ ನನಗೆ ಉತ್ತಮ ಸಹಕಾರ ನೀಡಿದ್ದಾರೆ. ಇಲ್ಲಿ ಓದುವ ಮಕ್ಕಳು ತಮ್ಮ ತಂದೆ-ತಾಯಿಯರಿಗೆ ಒಳ್ಳೆಯ ಹೆಸರು ತರಬೇಕು ಮತ್ತು ಜೀವನದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಹೇಳಿದರು. ವಿದ್ಯಾಸಂಸ್ಥೆಯಲ್ಲಿ 37ವರ್ಷ ಸೇವೆ ಸಲ್ಲಿಸಿ, ಶಾಲೆಯ ಸಾಧನೆಗೆ ಹೆಚ್ಚಿನ ಶ್ರಮ ಹಾಕುವ ನಿಟ್ಟಿನಲ್ಲಿ ತಮ್ಮ ಅಗಾಧ ಕೊಡುಗೆ ನೀಡಿದ್ದಾರೆ ಎಂದು ಸಂಸ್ಥೆಯ ಸಿಬ್ಬಂದಿ ಶ್ಲಾಘಿಸಿದರು.

ಈ ವೇಳೆ ಹಿರಿಯ ನಿವೃತ್ತ ಶಿಕ್ಷಕರಾದ ಆಂಜನೇಯ ನಾಯ್ಕ, ಜಿ.ಎಸ್ ಪ್ರಭುಲಿಂಗಪ್ಪ, ಜಿ.ಸಿ ಬಸವರಾಜ್, ಶಿಕ್ಷಕರಾದ ಬಾವಿ ಕಟ್ಟೆ ಕೊಟ್ರಪ್ಪ, ಜಿ.ಹೆಚ್ ತಿಪ್ಪೇಸ್ವಾಮಿ, ಎನ್.ಕೆ ವಿಜಯ್ ಕುಮಾರ್, ಹನುಮಂತ ನಾಯ್ಕ, ಯು.ಎಸ್ ಬಸವರಾಜ್, ಗ್ರಾ.ಪಂ. ಹಾಲಿ ಸದಸ್ಯ ನಾಗರಾಜ್, ಮಣಿ, ಬಿ.ಆರ್ ಹನುಮಂತಪ್ಪ, ಎಸ್. ಬಸವರಾಜ್ ಇತರರು ಇದ್ದರು.

## ಜಿಎಂ ಬೆಳೆ ಸಮಿತಿ ನಿರ್ಧಾರಗಳಲ್ಲಿ ಪಾರದರ್ಶಕತೆಗಾಗಿ ನಿಯಮ ಕಠಿಣ

**(1ನೇ ಪುಟದಿಂದ)** ಸಮಿತಿಯ ಸದಸ್ಯರು ಸಂಬಂಧಿಸಿದ ವಿಷಯಗಳಲ್ಲಿ ನೇರವಾಗಿ ಇಲ್ಲವೇ ಪರೋಕ್ಷವಾಗಿ ಸಂಬಂಧ ಹೊಂದಿದ್ದರೆ, ಅಂತಹ ವಿಷಯಗಳ ಚರ್ಚೆ ಹಾಗೂ ನಿರ್ಧಾರಗಳಿಂದ ದೂರ ಇರಬೇಕಿದೆ.

ಸಮಿತಿಗೆ ಸೇರುವ ಮುನ್ನ ನಾವು ಯಾವುದೇ ಹಿತಗಳ ಸಂಘರ್ಷ ಹೊಂದಿಲ್ಲ ಎಂಬದನ್ನು ಲಿಖಿತವಾಗಿ ತಿಳಿಸಬೇಕಿದೆ. ಸಂದರ್ಭ ಬಂದಾಗಲೆಲ್ಲ ಅವರು ಈ ಬಗ್ಗೆ ಪರಿಷ್ಕೃತ ಮಾಹಿತಿ ನೀಡಬೇಕಿದೆ. ಹಿತಗಳ ಸಂಘರ್ಷದ ಬಗ್ಗೆ ಅಸ್ಪಷ್ಟತೆ ಇದ್ದರೆ ಸಮಿತಿ ಅಧ್ಯಕ್ಷರು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಕುಲಾಂತರಿಗಳಿಗೆ ಸಂಬಂಧಿಸಿದಂತೆ 1989ರಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಪರಿಸರ ಹಾಗೂ ಮಾನವ ಆರೋಗ್ಯ ರಕ್ಷಣೆಗಾಗಿ ಈ ನಿಯಮಗಳನ್ನು ಜಾರಿಗೆ ತರಲಾಗಿದೆ. ಅಧಿಸೂಚನೆಯ ಬಗ್ಗೆ ಸಾರ್ವಜನಿಕರು 60 ದಿನಗಳಲ್ಲಿ ತಮ್ಮ ಆಕ್ಷೇಪಣೆ ಹಾಗೂ ಅಭಿಪ್ರಾಯಗಳನ್ನು ಸಲ್ಲಿಸಲು ಗಡುವು ನೀಡಲಾಗಿದೆ.

ಸರ್ಕಾರ ಕುಲಾಂತರಿ ಸಾಸಿವೆಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಸುಪ್ರೀಂ ಕೋರ್ಟ್ ಈ ಬಗ್ಗೆ ಕಳೆದ ವರ್ಷ ಜುಲೈನಲ್ಲಿ ಒಡಕಿನ ತೀರ್ಪು ನೀಡಿತ್ತು. ಕುಲಾಂತರಿ ಬೆಳೆಗಳ ಬಗ್ಗೆ ಕಠಿಣ ಉಸ್ತುವಾರಿಯ ಅಗತ್ಯವಿದೆ ಎಂದು ಕೋರ್ಟ್ ಹೇಳಿತ್ತು.

## ಪೂರ್ಣಾವಧಿ ಅಧಿಕಾರ ಮುಗಿಸಿ

**(1ನೇ ಪುಟದಿಂದ)** ಶರಣಾಗಿದ್ದರು.

ಮುಖ್ಯಮಂತ್ರಿ ಮಧ್ಯೆ ಪ್ರವೇಶಿಸಿ, ನೀನು ಕೆಪಿಸಿಸಿ ಅಧ್ಯಕ್ಷನಾಗುವುದಿಲ್ಲವೇ ಎಂದಾಗ, ಸತೀಶ್, 2028ರವರೆಗೂ ನಿಮ್ಮ ಕೈಕೆಳಗೇ ಸಚಿವನಾಗಿ ಕೆಲಸ ನಿರ್ವಹಿಸುತ್ತೇನೆ, ನಿಮ್ಮನಂತರ ಮುಖ್ಯಮಂತ್ರಿ ಆಗಲು ಬಯಸಿದ್ದೇನೆ ಎಂದಿದ್ದಾರೆ.

ಇದೇ ಸಂದರ್ಭದಲ್ಲಿ ಖಾಲಿ ಆಗುತ್ತಿರುವ ವಿಧಾನ ಪರಿಷತ್‌ನ 4 ಸ್ಥಾನಗಳನ್ನು ಭರ್ತಿ ಮಾಡುವ ವಿಷಯ ಮುಂದಿಟ್ಟಿದ್ದಲ್ಲದೆ, ನಾಮಕರಣ ಮಾಡುವುದರಿಂದ ಇವು ನಮ್ಮ ಪಕ್ಷಕ್ಕೇ ಲಭ್ಯವಾಗುತ್ತವೆ.

ಆಗ ಪರಿಷತ್‌ನಲ್ಲಿ ನಾವು ಪ್ರತಿಪಕ್ಷಗಳಿಗಿಂತ ಹೆಚ್ಚು ಸಂಖ್ಯಾಬಲ ಹೊಂದುತ್ತೇವೆ, ಬಜೆಟ್ ಅಧಿವೇಶನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಜಾಗಕ್ಕೆ ಸಚಿವ ಎನ್.ಎಸ್. ಭೋಸರಾಜ್ ಅವರನ್ನು ತರೋಣ, ಉಪಸಭಾಪತಿ ಸ್ಥಾನಕ್ಕೆ ರವಿ ಅವರನ್ನು ಕೂರಿಸೋಣ ಎಂದಿದ್ದಾರೆ.

ಮಧ್ಯೆ ಪ್ರವೇಶಿಸಿದ ಜಾರಕಿಹೊಳಿ ಮತ್ತು ಕೆ.ಎನ್.ರಾಜಣ್ಣ, ನೀವು ಹೇಳಿದವರೇ ಅಭ್ಯರ್ಥಿಗಳಾಗಲಿ, ಕೆಪಿಸಿಸಿ ಅಧ್ಯಕ್ಷರ ಮಾತಿಗೆ ಮನ್ನಣೆ ನೀಡಬೇಡಿ ಎಂದಿದ್ದಾರೆ.

ಇದೇ 7ರಂದು ದೆಹಲಿಗೆ ತೆರಳುತ್ತಿದ್ದು, ಎಐಸಿಸಿ ಅಧ್ಯಕ್ಷರು ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಈ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಜಾರಕಿಹೊಳಿ ಔತಣಕೂಟಕ್ಕೆ ತಮ್ಮ ಜಿಲ್ಲೆಯವರೇ ಆದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಆಹ್ವಾನ ನೀಡಿರಲಿಲ್ಲ, ಇನ್ನು ಉಪಮುಖ್ಯಮಂತ್ರಿ ವಿದೇಶ ಪ್ರವಾಸದಲ್ಲಿ ಇರುವುದರಿಂದ ಅವರ ಅನುಪಸ್ಥಿತಿಯಲ್ಲೇ ಈ ಎಲ್ಲಾ ಬೆಳವಣಿಗೆಗಳು ನಡೆದಿವೆ.


## ಪಿಹೆಚ್‌ಡಿ ವ್ಯಾಸಂಗ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಜ. 3 - ಪ್ರಥಮ ವರ್ಷದಲ್ಲಿ ಪೂರ್ಣಾವಧಿ ಪಿಹೆಚ್‌ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ, 3ಬಿ ಗೆ ಸೇರಿದ ಹೊಸ ವಿದ್ಯಾರ್ಥಿಗಳಿಗೆ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್ ನೀಡಲು ಅರ್ಹ ವಿದ್ಯಾರ್ಥಿಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇದೇ ದಿನಾಂಕ 20 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ http://www.bcwd.karnataka.gov.in ಅಥವಾ ಸಹಾಯವಾಣಿ ಸಂ: 8050770004ನ್ನು ಸಂಪರ್ಕಿಸಲು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಕನ್ನಡದಾ ಕಂಪು ಕುವೆಂಪು

ಸಾಹಿತ್ಯವಾಗಲು ಇನ್ನಷ್ಟು ಸೊಂಪು
ಬೀರಿಸಲಿಕ್ಕೆ ಕನ್ನಡದಾ ಕಂಪು



ಉದಯಿಸಿದ್ದರು ಕವಿ
ಕುವೆಂಪು
ಅವರ ಗೀತೆಗಳೋ
ಕಿವಿಗೆ ಇಂಪು
ಓದುತ್ತಿರೆ ಕೃತಿಗಳ
ಕಣ್ಣಿಗೆತ್ತದು ಜೊಂಪು

ಕಬ್ಬಿಗರುದಿಸಿದ ಈ
ನಲ್ನಾಡಲಿ
ಆಡು ಮುಟ್ಟದ ಸೊಪ್ಪಿಲ್ಲ ಎನುತಲಿ
ಪ್ರತಿ ಕ್ಷೇತ್ರದಿ ಬರಹ ವಿಸ್ತರಿಸುತಲಿ
ಮುಗಿಲೆತ್ತರಕ್ಕೆ ಬೆಳೆದರು ಸಾಹಿತ್ಯದಲಿ
ಕನ್ನಡ ಚಿರಾಯು ಎಂಬ ಆಶಯದಲಿ

ಕವಿಶೈಲದ ಸೊಬಗ ಕಾವ್ಯದಲೇ ಕಾಣೆನುತ
ಕನ್ನಡ ಮನಗಳ ಓದಿಗೆ ಅಣಿಗೊಳಿಸುತ
ಕಾವ್ಯ ಕುಸುರಿ ನಡೆಸಿದರು ಅನವರತ
ಇಂದಿಗೂ ಹೆಸರಿದೆ ಸಾಹಿತ್ಯ ಜೀವಂತ
ನುಡಿದಿಹರು ಕನ್ನಡ ಅದ್ಭುತ ಅನಂತ.

**- ಉಷಾ ಈ.,**
ಉಪನ್ಯಾಸಕರು, ದಾವಣಗೆರೆ.

## ಅಕ್ಷರದವ್ವ..



ಆಧುನಿಕ ಶಿಕ್ಷಣದ ತಾಯಿ
ಅಕ್ಷರದ ಹಣತೆ ಹಚ್ಚಿದ
ಸಾವಿತ್ರಿಬಾಯಿ
ಅಸ್ಪೃಶ್ಯರಿಗೂ ಅಕ್ಷರವ
ಉಣಿಸಿದ ತ್ಯಾಗಮಯಿ
ಕಲ್ಲೆದೆಗೆ ಕರುಣೆ ತುಂಬಿದ
ಕಾರುಣ್ಯ ಮೂರ್ತಿ

ಮರಾಠಿ ಕಾವ್ಯದ ಪ್ರವರ್ತಕಿ
ಭಾರತದ ಮೊದಲ ಶಿಕ್ಷಕಿ
ದಣಿವರಿಯದ ಸತ್ಯಶೋಧಕಿ
ಸತ್ಯ ಶೋಧಕ ಸಮಾಜದ ಸಂಸ್ಥಾಪಕಿ


ನೋವು, ಸಂಕಟ, ಅವಮಾನಗಳ ಮೆಟ್ಟಿನಿಂತ ಮಹಿಳೆ
ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಊದಿದರು ಕಹಳೆ
ತಾರತಮ್ಯ ನಿವಾರಿಸಿದ ಛಲಗಾತಿ
ಮಹಿಳಾ ಹಕ್ಕುಗಳ ಹೋರಾಟಗಾರ್ತಿ

ಪುನರ್ವಿವಾಹಕ್ಕೆ ಪ್ರೋತ್ಸಾಹಿಸಿದ ಪುರೋಹಿತೆ
ನೊಂದ ಜೀವಗಳಿಗೆ ಮರುಜನ್ಮ ನೀಡಿದ ಜನ್ಮದಾತೆ
ಅಕ್ಷರದ ಮೂಲಕ ಕ್ರಾಂತಿ ಮಾಡಿದ ಶಾಂತಿದಾತೆ
ಇತಿಹಾಸದ ಪ್ರತಿ ಪುಟದಲ್ಲೂ ಹಚ್ಚಗಿದೆ ಅವರ
ಘನತೆ,ಯಶೋಗಾಥೆ.

**- ಬಸವರಾಜ.** ಕರುವಿನ ಬಸವನಾಳು.

## ಸಿದ್ದೇಶ್ವರ ಶ್ರೀಗಳಿಗೆ ನಮನ

ಗಡ್ಡ ಬಿಡಲಿಲ್ಲ
ತಲೆ ಬೋಳಿಸಲಿಲ್ಲ
ಖಾವಿ ಬಟ್ಟೆ ತೊಡಲಿಲ್ಲ
ಕೊರಳಿಗೆ ರುದ್ರಾಕ್ಷಿ ಹಾಕಲಿಲ್ಲ
ಕಾಲಿಗೆ ಪಾದುಕೆ ತೊಡಲಿಲ್ಲ
ಅದ್ದೂರಿ ಪೀಠಾರೋಹಣ ಮಾಡಿಸಿಕೊಳ್ಳಲಿಲ್ಲ
ಬಿಳಿ ವಸ್ತ್ರಧಾರಿಯಾಗಿ ಸಾದಾ ಸೀದಾ
ಮನುಷ್ಯನಾಗಿ



ಸನ್ಯಾಸತ್ವದ ಆಚರಣೆಗಳನ್ನು ಮಾಡಿ
ಆಸೆಯೇ ದುಃಖಕ್ಕೆ ಮೂಲ ಎಂದು
ಬುದ್ಧನಂತೆ ಬಾಳಿ
ಇವನಾರು? ಇವನಾರು? ಎನ್ನದೇ
ಬಸವಣ್ಣನಂತೆ
ಬದುಕಿದ ಮಹಾಪುರುಷ ಸಿದ್ದೇಶ್ವರ
ಶ್ರೀಗಳು ನೋಡಾ ಮರುಳಸಿದ್ದ
ಸಿದ್ದೇಶ್ವರ ಶ್ರೀಗಳಿಗೆ ಪುಣ್ಯಸ್ಮರಣೆಯ
ದಿನದ ಭಕ್ತಿ ಪೂರ್ವಕ ನಮನ

**- ಎಸ್.ಸಿದ್ದೇಶ್ ಕುರ್ಕಿ**, ದಾವಣಗೆರೆ.

## 11ರಂದು ಸಂಕ್ರಾಂತಿ ಕವಿಗೋಷ್ಠಿಗೆ ಆಹ್ವಾನ

ದಾವಣಗೆರೆ,ಜ. 3 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಸಂಕ್ರಾಂತಿ ಪ್ರಯುಕ್ತ ಇದೇ ದಿನಾಂಕ 11 ರ ಮಂಗಳವಾರ ಸಂಕ್ರಾಂತಿ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ. ವಾಟ್ಸಾಪ್ ಸಂಖ್ಯೆ 97438 97578ರಲ್ಲಿ ಹೆಸರು ನೋಂದಾಯಿಸಬಹುದು ಎಂದು ಕವಿಗೋಷ್ಠಿಯ ಸಂಯೋಜಕರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.


**ಮನೆ ಮಾರಾಟಕ್ಕೆ**
30x40 ಸಿದ್ಧವೀರಪ್ಪ ಬಡಾವಣೆ
30x40 ಡ್ಯೂಪ್ಲೆಕ್ಸ್
ವಿವೇಕಾನಂದ ಬಡಾವಣೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ತಿಮ್ಮಾರೆಡ್ಡಿ ಕಾಲೇಜ್ ಹತ್ತಿರ 30x56, 30x56 North ಅಕ್ಕ-ಪಕ್ಕ, 30x46, 30x46 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟು, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್, 40x60 ಪೂರ್ವ 3 ಸೈಟುಗಳು 40 ಅಡಿ ರಸ್ತೆಗೆ ಬನಶಂಕರಿಯಲ್ಲಿ (ಹೊಸ) 40x70 ಪಶ್ಚಿಮ 30x57 ಪೂರ್ವ ಸರ್ಕಾರಿ ನೌಕರರ ಬಡಾವಣೆಯಲ್ಲಿ 30x40 ಪೂರ್ವ 30x51 ಉತ್ತರ, ಸೈಟುಗಳು ಮಾರಾಟಕ್ಕಿವೆ.
ಸಂಪರ್ಕಿಸಿ: (ಪ್ರಾಪರ್ಟಿ ಅಡ್ವೈಸರ್)
ಸುರೇಶ್ ಪಿ.ಎಸ್. ಶಾಮನೂರು
ಮೊ: 84314 00907

**ಬಟ್ಟೆ ಅಂಗಡಿ ಮಾರಾಟಕ್ಕಿದೆ**
ಬಾಯ್ಸ್ ಹಾಸ್ಟೆಲ್ ರೋಡ್, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ.
ಸಂಪರ್ಕಿಸಿ :
ಮೊ. 96114-70793

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ.
ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟ್, ಮನೆ, ಜಮೀನು**
ನೇರ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನನ್ನದು. ಅರ್ಧ ($^1/_2$%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಗೆಳೆಯರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಜಮೀನು ಬೇಕಾದಲ್ಲಿ ಸಂಪರ್ಕಿಸಿ**
ಸಂತೆ ಬೇನ್ನೂರು ಹತ್ತಿರ 8 1/2 ಎಕರೆ ಜಮೀನು ಮಾರಾಟಕ್ಕೆ ಇದೆ. ಇದರಲ್ಲಿ 4 ಎಕರೆ 2 ವರ್ಷ ಅಡಿಕೆ ಗಿಡ ಇವೆ. ಇನ್ನೂ ಖಾಲಿ ಜಾಗ 4 1/2 ಎಕರೆ, 2 ಬೋರು ಇವೆ ಮತ್ತು ಚನಾಲ್‌ನಿಂದ ಪೈಪ್ ಲೈನ್ ಮಾಡಿದ್ದಾರೆ. ಹೊಸ ಬಾತಿ & ಹಳೆ ಬಾತಿ ಮಧ್ಯ 28 ಗುಂಟೆ ಮಾರಾಟಕ್ಕೆ & 4 ಗುಂಟೆ ಮೇನ್ ರೋಡ್‌ಗೆ ಇದೆ. ಈ ಜಮೀನುಗಳು ಮಾರಾಟಕ್ಕೆ ಇವೆ.
ಸಂಪರ್ಕಿಸಿ : ಸುರೇಶ್ PS ಶಾಮನೂರು, ಪ್ರಾಪರ್ಟಿ ಅಡ್ವೈಸರ್
84314 00907

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

**ಸೈಟ್ ಮಾರಾಟಕ್ಕಿದೆ**
1151 sqft ಪೂರ್ವ ನಂದಿನಿ ಲೇಔಟ್, ರಶ್ಮಿ ಹಾಸ್ಟೆಲ್ ಹತ್ತಿರ, 2550 Rs/sqft for Negotiable ನೇರ ಮಾಲೀಕರಿಂದ
94813 63832

**WANTED**
Required trainee office staff with computer knowledge
**Nadig Associates**
Tax & financial consultants
94220 62614

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಬೇಕಾಗಿದ್ದಾರೆ**
ಸೀನಿಯರ್ ಅಕೌಂಟೆಂಟ್ : ಟ್ಯಾಲಿ ಪ್ರೈಮ್, ಬಿಲ್ಲಿಂಗ್ ಹಾಗೂ ಜಿಎಸ್ ಟಿ ಫೈಲಿಂಗ್‌ನಲ್ಲಿ ಅನುಭವವುಳ್ಳವರು. ವೇತನ ರೂ.20,000/- ದಿಂದ 25,000/- ವಿಳಾಸ : ರಿಷಿ ಸ್ಪೈಸ್ ಇಂಡಸ್ಟ್ರೀಸ್ ಪ್ರೈ.ಲಿ., ಪಿ.ಬಿ. ರಸ್ತೆ, ದಾವಣಗೆರೆ. ಆಸಕ್ತರು ಸ್ವವಿವರವನ್ನು
87927 06279
ನಂ. ಗೆ ವ್ಯಾಟ್ಸಾಪ್ ಮಾಡಬಹುದು ಅಥವಾ info@risispice.com ಗೆ ಇಮೇಲ್ ಮಾಡಬಹುದು.

**House for Rent**
purva face, 3rd floor, 1BHK, 3rd floor RHK available for Rent KB extention, Dvg.
70265 64680

**ಸೈಟ್ ಬೇಕಾಗಿದೆ**
30x40 ಸೈಟ್, ಹೊಸ ಮನೆ ನಿರ್ಮಾಣಕ್ಕೆ ಸೈಟ್ ಬೇಕಾಗಿದೆ. ಬಾತಿ, ಜಿ.ಎಂ. ಐ.ಟಿ ಕಾಲೇಜ್, ಬಾಲಾಜಿ ನಗರ, ಕುಂದವಾಡ, ಹಾಗೂ ದಾವಣಗೆರೆ ಸುತ್ತ ಮುತ್ತ.
81235 29544

**ಹೋಟೆಲ್ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಫುಲ್ ಟೈಂ & ಪಾರ್ಟ್ ಟೈಂ
ಸಂಪರ್ಕಿಸಿ :
99646 36217

**ಹೋಟೆಲ್ ಕೆಲಸಕ್ಕೆ ಸ್ಟಾಫ್ ಬೇಕಾಗಿದ್ದಾರೆ**
ಕ್ಲೀನರ್ - 1, ನಾರ್ತ್ ಇಂಡಿಯನ್ ತಂದೂರಿ ಕುಕ್ - 1
ಕುಕ್ ಅಸಿಸ್ಟೆಂಟ್ - 1
ಊಟ ಹಾಗೂ ವಸತಿ ಇರುತದೆ
98459 47905

**ಹೊಸ ಮೊಬೈಲ್ ರಿಪೇರಿ ಅಂಗಡಿ ಮಾರಾಟಕ್ಕಿದೆ**
ಮೊಬೈಲ್ ರಿಪೇರಿ ಮಾಡಲ ಬಳಸುವ ರಿಪೇರಿ ಸಾಮಾನುಗಳು ಹಾಗೂ ಟೇಬಲ್ ಶೋಕೇಸ್, ರ್‍ಯಾಕ್‌ಗಳು, ಕಂಪ್ಯೂಟರ್ ಹಾಗೂ ಕೌಂಟರ್ ಟೆಂಪರ್ ಗ್ಲಾಸ್‌ಗಳು, ಇನ್ನು ಇತ್ಯಾದಿ. ಸ್ಥಳ : 'ಮನು' 2ನೇ ಮೇನ್ 2ನೇ ಕ್ರಾಸ್, ವಿನೋಬನಗರ, ದಾವಣಗೆರೆ.
94483 39151

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ನಿವೇಶನದ ನೋಂದಣಿ ಪತ್ರ ಕಳೆದಿದೆ**
ಪ್ರಭು ಕೆ.ವಿ. ಬಿನ್ ಕೆ.ಎಲ್. ವೀರಭದ್ರಪ್ಪ ಹೆಸರಿನಲ್ಲಿರುವ ಹಿರೇಕೋಗಲೂರು ಗ್ರಾಮದ ಖಾನೇಷುಮಾರಿ ನಂ. 196ರ ನಿವೇಶನದ ನೋಂದಣಿ ಪತ್ರದ ಮೂಲ ಪ್ರತಿಗಳು ಮನೆಯನ್ನು ಸ್ವಚ್ಛಗೊಳಿಸುವಾಗ ಕಳೆದಿರುತ್ತವೆ. ಸಿಕ್ಕವರು ಈ ಕೆಳಗಿನ ಫೋ.ನಂ.ಗೆ ತಿಳಿಸಲು ಕೋರಿದೆ.
91645 57461

**ಗೋದಾಮುಗಳು ಬಾಡಿಗೆಗೆ**
ನಗರದ KSRTC ಬಸ್ ಸ್ಟ್ಯಾಂಡ್ ಎದುರು, APMC ಮಾರ್ಕೆಟ್ ಪಕ್ಕದಲ್ಲಿರುವ ದಾವಣಗೆರೆ ಎಣ್ಣೆ ಸಂಕೀರ್ಣ (KOF) ನಲ್ಲಿ ವಿವಿಧ ಅಳತೆಯ ಗೋದಾಮುಗಳು ಬಾಡಿಗೆಗೆ ಲಭ್ಯವಿರುತ್ತವೆ.
9600 ಚ.ಅ. ಮತ್ತು 4800 ಚ.ಅ.
ಗೋದಾಮು ಪ್ರದೇಶವು CCTV ಕ್ಯಾಮರಾ ಹಾಗೂ ಭದ್ರತಾ ವ್ಯವಸ್ಥೆ ಇರುತ್ತದೆ. ಗೋದಾಮುಗಳು ಕೃಷಿ ಉತ್ಪನ್ನಗಳ ಸರಕುಗಳು ಹಾಗೂ ಇತರೆ ಹಾಳಾಗದ ಸರಕುಗಳ ಶೇಖರಣೆಗೆ ಸೂಕ್ತವಾಗಿವೆ.
87625 88632

**ವಾಣಿಜ್ಯ ಮಳಿಗೆ ಬಾಡಿಗೆಗಿದೆ**
ಹರಿಹರದ ಟೆಂಪಲ್ ರಸ್ತೆಯಲ್ಲಿರುವ ಪ್ರಭಾಕರ್ ಟೆಕ್ಸ್‌ಟೈಲ್ಸ್ ಎದುರಿಗೆ 18x80 ಅಡಿ ಅಳತೆಯ ಲಿಫ್ಟ್ ಸೌಕರ್ಯವಿರುವ ನೆಲಮಹಡಿ, 1ನೇ ಮಹಡಿ, 2ನೇ ಮಹಡಿಯ ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ. ಆಸಕ್ತರು ವಿಚಾರಿಸಿ
ಮೊ. : 98442 94446

**ಅಡಿಕೆ ತೋಟ ಮಾರಾಟಕ್ಕಿವೆ**
NH-4 ರಸ್ತೆಯಲ್ಲಿ 5 $^1/_2$ ವರ್ಷದ ಗಿಡ, 6 $^1/_2$ ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. 200 ಮೀ ಒಳಗೆ ಇವೆ. 2 ಎಕರೆ ಗದ್ದೆ ಇದೆ, ಕಲ್ಲು ಬಂಡೆ ಹತ್ತಿರ. ಬೇರೆ ಕಡೆ ಜಮೀನು ಬೇಕಾಗಿದ್ದಲ್ಲಿ ವಿಚಾರಿಸಿ.
ಏಜೆಂಟರು
81231 15137

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಷನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು
Swapna cushion work Maharaj pet. DVG
98445- 81966

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಗೋಡೌನ್ ಬಾಡಿಗೆಗೆ**
4,000 ಅಡಿ + ಸ್ಟೋರೇಜ್ 2,500 ಅಡಿ ಕರೂರು ಇಂಡಸ್ಟ್ರಿಯಲ್ ಏರಿಯಾ KIADB ಗೋಡೌನ್ ಬಾಡಿಗೆಗೆ ಮತ್ತು ಹಳೆಯ ಡೈನಿಂಗ್ ಚೇರ್‌ಗಳು ಸೇಲ್‌ಗೆ ಇವೆ.
98459 77475
92421 45611

**ಎಲೆಕ್ಟ್ರಿಕ್ ಶಾಪ್ ಮಾರಾಟಕ್ಕಿದೆ**
ಎಲೆಕ್ಟ್ರಿಕಲ್ ಸಾಮಾನುಗಳ ಸಮೇತವಾಗಿ (ರ್‍ಯಾಕ್ + ಟೇಬಲ್‌ಗಳು) ಮಾರಾಟಕ್ಕಿವೆ. 60 ಅಡಿ ರಿಂಗ್ ರೋಡ್, ಶ್ರೀನಿವಾಸ ನಗರ, ದಾವಣಗೆರೆ ತಾ.
99165 25870, 99866 29551

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ ಹೋಂ ಅಪ್ಲೈಯನ್ಸಸ್ ಶಾಪ್‌ಗೆ ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆದ್ಯತೆ
ಸ್ಥಳ : ಹರಿಹರ.
77603 10603
99648 75861

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಆದಿತ್ಯ ಮೆಡಿಕಲ್ಸ್
ಚಿನ್ನು ಟವರ್ಸ್, HKR ಸರ್ಕಲ್, ಕಾಲೇಜು ರಸ್ತೆ, ನಿಟುವಳ್ಳಿ, ದಾವಣಗೆರೆ -4
94480 21327

**ಮಾರಾಟಕ್ಕಿದೆ**
ಗಡಿಯಾರ ಕಂಬದ ಹತ್ತಿರದ ಕಮರ್ಷಿಯಲ್ ಎರಡು ಅಂಗಡಿ ಹಾಗೂ ಡುಪ್ಲೆಕ್ಸ್ ಮನೆ ಇದೆ.
ಸಂಪರ್ಕಿಸಿ :
90196 95121

**CARS FOR SALE**
KIA SONET GTX +
New I20 Petrol
Hyundai Creta Diesel
Maruthi Celerio Automatic
*Contact : Daivik Iynahalli*
99456 43223

**ಮಳಿಗೆ ಬಾಡಿಗೆಗೆ ಬೇಕಾಗಿದೆ**
ಎಂಸಿಸಿ ಬ್ಲಾಕ್ ಮಾಮಾಸ್ ಜಾಯಿಂಟ್ ರಸ್ತೆ, ಬಾಯ್ಸ್ ಹಾಸ್ಟೆಲ್ ರಸ್ತೆ, ಡೆಂಟಲ್ ಕಾಲೇಜು ರಸ್ತೆ ಸುತ್ತಮುತ್ತ 300-400 & 800 -1000 ಚದರ ಅಡಿ ಜಾಗವುಳ್ಳ ಸುಸಜ್ಜಿತವಾದ ಮಳಿಗೆ ಬಾಡಿಗೆಗೆ ಬೇಕಾಗಿದೆ.
95354 23159, 95133 25556
80739 34690

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ
29.5 x 70=2065 feet
ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ.
74119 19668

**ಸೈಟ್ ಮಾರಾಟಕ್ಕಿದೆ**
ದಾವಣಗೆರೆ ಜೆ.ಹೆಚ್. ಪಟೇಲ್ ನಗರ, ಸ್ಟೇಡಿಯಂ ಹತ್ತಿರ, 5ನೇ ಮೇನ್, 3ನೇ ಕ್ರಾಸ್, 'ಇ' ಬ್ಲಾಕ್‌ನಲ್ಲಿ ಪಶ್ಚಿಮಾಭಿಮುಖ, 40'x55' ಅಳತೆಯ ಖಾಲಿ ಸೈಟ್ ಮಾರಾಟಕ್ಕಿದೆ. ನಿವೇಶನ ಸಂಖ್ಯೆ 837/1
97434 30963

**Contact for school / college furnitures**
ಶಾಲಾ / ಕಾಲೇಜು ಪಿಠೋಪಕರಣಗಳಿಗಾಗಿ
ಸಂಪರ್ಕಿಸಿ
94815 40812

**SITE FOR SALE**
J.H. Patel Badavane (E Block) 3 Main 1st Cross
SITE NUMBER : 723,
SIZE : 30×40 FASE: ಪೂರ್ವ
63625 16948, 97314 54916
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಮಾಂತ್ರಿಕ ಮೋಡಿ ಬೆಟ್ಟಪ್ಪ ನಂ. 1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ, ಲೈಂಗಿಕ, ದಾಂಪತ್ಯ ಸಮಸ್ಯೆ, ನೀವು ಇಷ್ಟ ಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ : ಕೊಳ್ಳೆಗಾಲದಿಂದ ನೇರ ಪರಿಹಾರ
89716 99826

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಮನೆ ಬಾಡಿಗೆಗಿದೆ**
Fully Furnished ಸುಸಜ್ಜಿತವಾದ 3BHK ಇಂಡಿಪೆಂಡೆಂಟ್ ಮನೆ ಬಾಡಿಗೆಗಿದೆ. on daily/monthly basis in center of the city ವಿನೋಬನಗರ, 4th ಮೇನ್, ಪಿ.ಬಿ. ರಸ್ತೆಯಿಂದ 100 ಮೀಟರ್ ಇದೆ.
79752 70406

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್, ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್, ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್, ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀಸಾಯಿ ಎಗ್ ಸೆಂಟರ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ
96860 22969

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ನಗರದಲ್ಲಿ ನಾಳೆ ಕನಕ ಜಯಂತ್ಯುತ್ಸವಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ

**ಇಂದು ಬೈಕ್ ರ್‍ಯಾಲಿ**

ದಾವಣಗೆರೆ, ಜ.3- ದಾವಣಗೆರೆ ಕುರುಬ ಸಮಾಜ ಹಾಗೂ ಸಿದ್ಧರಾಮಯ್ಯ ಅಭಿಮಾನಿ ಬಳಗದ ವತಿಯಿಂದ ನಾಡಿದ್ದು ದಿನಾಂಕ 5 ರ ಭಾನುವಾರ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಜಿಲ್ಲಾಮಟ್ಟದ 537 ನೇ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕುರುಬ ಸಮಾಜದ ಮುಖಂಡರೂ, ಮಾಜಿ ಶಾಸಕ ಎಸ್. ರಾಮಪ್ಪ ಹಾಗೂ ಯುವ ಮುಖಂಡ ಜೆ.ಎನ್. ಶ್ರೀನಿವಾಸ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕನಕ ಜಯಂತಿ ಪ್ರಯುಕ್ತ ನಾಳೆ ದಿನಾಂಕ 4 ರಂದು ನಗರದ ಎಸ್.ಎಸ್.ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿನ ಶ್ರೀ ಬೀರೇಶ್ವರ ಬಡಾವಣೆಯ ಬಳಿ ಇರುವ ಕಾಳಿದಾಸ ವೃತ್ತದಿಂದ ಬೈಕ್ ರ್‍ಯಾಲಿ ಆಯೋಜಿಸಲಾಗಿದ್ದು, ಎಂ.ಡಿ. ಶೇಖರಪ್ಪ, ಪುಷ್ಪಾ ಆನಂದ್, ಕೆ. ಪುಟ್ಟಪ್ಪ, ಎನ್.ಜಿ. ರುದ್ರಪ್ಪ, ಆರ್.ಹೆಚ್.ನಾಗಭೂಷಣ್ ಚಾಲನೆ ನೀಡಲಿದ್ದಾರೆ. ರ್‍ಯಾಲಿಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಲಿದೆ.

ನಾಡಿದ್ದು ದಿನಾಂಕ 5 ರಂದು ಬೆಳಿಗ್ಗೆ 9.30 ಕ್ಕೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಜಿ.ಎನ್. ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಪಾಲಿಕೆ ಆಯುಕ್ತೆ ರೇಣುಕಾ, ಕಾಂಗ್ರೆಸ್ ಮುಖಂಡರಾದ ಎಸ್. ರಾಮಪ್ಪ, ಹೆಚ್.ಬಿ. ಮಂಜಪ್ಪ ಮೆರವಣಿಗೆ ಚಾಲನೆ ನೀಡುವರು.

ಇದೇ ವೇಳೆ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ತಿಂತಿಣಿ ಶಾಖಾ ಮಠದ ಶ್ರೀ ಸಿದ್ಧರಾಮಾನಂದ ಪುರಿ ಸ್ವಾಮೀಜಿ, ಹದಡಿಯ ಚಂದ್ರಗಿರಿ ಮಠದ ಶ್ರೀ ಮುರುಳೀಧರ ಸ್ವಾಮೀಜಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನನಾಂದ ಪುರಿ ಸ್ವಾಮೀಜಿ, ಹರಿಹರ ಪಂಚಮಸಾಲಿ ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಹೊಸದುರ್ಗ ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದ ಪುರಿ ಸ್ವಾಮೀಜಿ, ಮುಸ್ಲಿಂ ಧರ್ಮಗುರು ಮೌಲಾನಾ ಬಿ.ಎ.ಇಬ್ರಾಹೀಂ ಸಕಾಫಿ, ಕ್ರಿಶ್ಚಿಯನ್ ಧರ್ಮಗುರು ಫಾದರ್ ಯರಿಕ್ ಮ್ಯಾಥ್ಯೂಸ್, ಡಾ. ಉದಯ ಶಂಕರ್ ಒಡೆಯರ್, ಅಲ್ಲಾಮ ಇಲಿಯಾಸ್ ಖಾದ್ರಿ ಸಾನ್ನಿಧ್ಯ ವಹಿಸಲಿದ್ದಾರೆ.

ನಂತರ ನಡೆಯುವ ಕನಕ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ದಾಸ ಶ್ರೇಷ್ಠ ಕನಕ ದಾಸರ ಪುತ್ಥಳಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ವಿಶೇಷ ಆಹ್ವಾನಿತರಾಗಿ ಸಚಿವರಾದ ಡಾ.ಜಿ. ಪರಮೇಶ್ವರ್, ಭೈರತಿ ಸುರೇಶ, ಡಾ. ಹೆಚ್.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ, ಬಿ.ಜೆಡ್ ಜಮೀರ್ ಅಹಮದ್ ಖಾನ್, ಸಂತೋಷ್ ಎಸ್. ಲಾಡ್, ಶಿವರಾಜ್ ಎಸ್. ತಂಗಡಗಿ ಭಾಗವಹಿಸಲಿದ್ದಾರೆ.

ಇವರೊಂದಿಗೆ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್.ಎಂ. ರೇವಣ್ಣ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಬಿ.ಪಿ ಹರೀಶ್, ಕೆ.ಎಸ್. ಬಸವಂತಪ್ಪ, ಲತಾ ಮಲ್ಲಿಕಾರ್ಜುನ್, ಬಿ. ದೇವೇಂದ್ರಪ್ಪ, ಬಿ.ಜೋ. ಗೋವಿಂದಪ್ಪ, ಬಸವರಾಜ್ ಶಿವಣ್ಣನವರ್, ತರಿಕೇರಿಯಲ್ಲಿ ಬಸವರಾಜ್ ಶಿವಣ್ಣನವರ್, ತರಿಕೆರೆ ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಕೆ.ಎಂ. ರಾಮಚಂದ್ರಪ್ಪ, ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಹೆಚ್.ಬಿ. ಮಂಜಪ್ಪ, ಮಹಿಮಾ ಜೆ.ಪಟೇಲ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಎಸ್. ರಾಮಪ್ಪ, ಎಸ್.ಎ. ರವೀಂದ್ರನಾಥ್, ಹೆಚ್. ಆಂಜನೇಯ, ಹೆಚ್. ಕಾಂತರರಾಜ್, ನಂದಿಗಾವಿ ಶ್ರೀನಿವಾಸ್ ಸೇರಿದಂತೆ ಇತರರು ಬೈಕ್ ರ್‍ಯಾಲಿಯಲ್ಲಿ ಭಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಹೆಚ್.ಬಿ. ಗೋಣೆಪ್ಪ, ಶ್ರೀನಿವಾಸ ನಂದಿಗಾವಿ, ಜೆ.ಎನ್. ಶ್ರೀನಿವಾಸ್, ಬಿ.ವೀರಣ್ಣ, ಬಿ. ರೇವಣ ಸಿದ್ಧಪ್ಪ, ಡಿ. ಬಸವರಾಜ್, ರಂಗಸ್ವಾಮಿ, ಬಸಾಪುರದ ನಾಗೇಂದ್ರಚಾರ್, ಟಿ.ಎಸ್. ಶಿವಣ್ಣ, ಹಾಲೇಕಲ್ಲು ಅರವಿಂದ್, ಹಾಲೇಕಲ್ಲು ಬಿ. ಲಿಂಗರಾಜು, ದಾದುಸೇಠ್, ಇಟ್ಟಿಗುಡಿ ಮಂಜಣ್ಣ, ಹೊನ್ನಳಿ ಸಿದ್ಧಪ್ಪ,ಮಹಮದ್ ಜಬೀವುಲ್ಲಾ, ವಜನಾ ಮತ್ತಿತರರು ಉಪಸ್ಥಿತರಿದದರು.

# ಗುಣಮಟ್ಟದ ಶಿಕ್ಷಣದಿಂದ ಸದೃಢ ದೇಶ ನಿರ್ಮಾಣ ಸಾಧ್ಯ



**ಸೋಮೇಶ್ವರೋತ್ಸವ ಸಮಾರಂಭ ಉದ್ಘಾಟಿಸಿದ ಸಾಹಿತಿ ಅಶೋಕ್ ಹಂಚಲಿ**

ದಾವಣಗೆರೆ, ಜ.3- ಭವ್ಯ ಭಾರತ ನಿರ್ಮಾಣಕ್ಕಾಗಿ ತಾಯಿಯಲ್ಲಿ ಗುರುವಿನ ಭಾವ ಹಾಗೂ ಗುರುವಿನಲ್ಲಿ ತಾಯಿಯ ಭಾವ ಇರಬೇಕು ಎಂದು ಬಸವನ ಬಾಗೇವಾಡಿಯ ಸಾಹಿತಿ ಅಶೋಕ್ ಹಂಚಲಿ ಹೇಳಿದರು.

ನಗರದ ಶ್ರೀ ಸೋಮೇಶ್ವರ ವಿದ್ಯಾಲಯ ದಿಂದ ಶುಕ್ರವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಸೋಮೇಶ್ವರೋತ್ಸವ-2025 ಸಮಾರಂಭ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸುಂದರ ಸಮಾಜ ಹಾಗೂ ಸದೃಢ ದೇಶ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಪಾಲಕರು ಮಕ್ಕಳಿಗೆ ಅಂಕ ಗಳಿಸಲು ಒತ್ತಡ ಹೇರಿ ಅವರನ್ನು ಕುಬ್ಜರನ್ನಾಗಿಸದೆ, ಸಾಂಸ್ಕೃತಿಕ ಚಿಂತನೆಗಳು, ಮೌಲ್ಯಗಳನ್ನು ತುಂಬುವ ಕೆಲಸ ಮಾಡಬೇಕು ಎಂದು ಕಿವಿ ಮಾತು ಹೇಳಿದರು.

ದೇಶಪ್ರೇಮ, ಮಾತೃಭಕ್ತಿ, ಸಂಸ್ಕೃತಿ, ಮೌಲ್ಯಗಳನ್ನು ನೀಡದ ಶಿಕ್ಷಣಕ್ಕೆ ಅರ್ಥವಿಲ್ಲ ಎಂದು ಪ್ರತಿಪಾದಿಸಿದ ಅವರು, ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಮಾರಾಟದ ಸರಕಾಗಿದೆ. ಗುಣಮಟ್ಟದ ಶಿಕ್ಷಣ ಮರೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸೋಮೇಶ್ವರ ವಿದ್ಯಾಲಯವು ವಿದ್ಯೆಯ ಜೊತೆ ಸಂಸ್ಕೃತಿ, ಸಂಸ್ಕಾರ, ಮೌಲ್ಯಗಳನ್ನು ಧಾರೆ ಎರೆಯುತ್ತಾ ದೇಶಕ್ಕೆ ಸದೃಢ ಪ್ರಜೆಗಳನ್ನು ಕೊಡುಗೆಯಾಗಿ ನೀಡುತ್ತಿರುವುದು ಶ್ಲಾಘನೀಯ. ಈ ಸಂಸ್ಥೆ ಮುಂದಿನ ದಿನಗಳಲ್ಲಿ ಮತ್ತಷ್ಟು ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ಆಶಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಣೇಬೆನ್ನೂರು ಮಾಜಿ ಶಾಸಕ ಅರುಣ್ ಕುಮಾರ್ ಪೂಜಾರ್ ಮಾತನಾಡಿ, ಇಂದು ನಾವು ಎಷ್ಟು ಹಣವನ್ನಾದರೂ ಗಳಿಸಬಹುದು. ಆದರೆ ವಿದ್ಯೆ ಸಂಪಾದಿಸುವುದು ಸುಲಭವಲ್ಲ. ಸೋಮೇಶ್ವರ ವಿದ್ಯಾಲಯವು ಬಡ ಹಾಗೂ ಮಧ್ಯಮ ವರ್ಗದವರಿಗೆ ಅತಿ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಹೇಳಿದರು.

ಬಡತನದಿಂದಲೇ ಆರಂಭವಾದ ಈ ವಿದ್ಯಾಸಂಸ್ಥೆ ಇಂದು ಎತ್ತರಕ್ಕೆ ಬೆಳೆದಿದೆ. ಮುಂದಿನ ವರ್ಷ ವಿಜ್ಞಾನ ಪಿಯು ಕಾಲೇಜು ಆರಂಭವಾಗಲಿದೆ. ಅಷ್ಟೇ ಸಾಲದು ದಾವಣಗೆರೆಯಲ್ಲಿ ಮೆಡಿಕಲ್ ಕಾಲೇಜು ಆರಂಭಿಸುವಷ್ಟು ಈ ಸಂಸ್ಥೆ ಬೆಳೆಯಲಿ ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಮಹಾಲಿಂಗಪ್ಪ ಯಾದವ್, ಪಿಜಿಯೋಥೆರಪಿಸ್ಟ್ ಡಾ.ಬಸವರಾಜ್ ಶಿವಪೂಜೆ ಅವರಿಗೆ ಸೋಮೇಶ್ವರ ಸಿರಿ ಗೌರವ ಪ್ರದಾನ ಮಾಡಲಾಯಿತು.

ಹುಬ್ಬಳ್ಳಿ ಚಿನ್ಮಯ ಮಿಷನ್‌ನ ಶ್ರೀ ಸ್ವಾಮಿ ಕೃತಾತ್ಮಾನಂದರವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಶ್ರೀ ಸೋಮೇಶ್ವರ ವಿದ್ಯಾಲಯದ ಆಡಳಿತ ಮಂಡಳಿ ನಿರ್ದೇಶಕ ಪಿ.ಎನ್. ಪರಮೇಶ್ವರಪ್ಪ, ಅಧ್ಯಕ್ಷ ಹೆಚ್.ಆರ್. ಅಶೋಕ ರೆಡ್ಡಿ, ಸಂಸ್ಥೆಯ ಸಂಸ್ಥಾಪಕ ಕೆ.ಎಂ. ಸುರೇಶ್, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಶಿಕ್ಷಕರುಗಳಾದ ವೀಣಾ, ಪ್ರಭಾವತಿ, ಹರೀಶ್ ಬಾಬು, ಪ್ರಕಾಶ್, ಡಾ. ಶ್ವೇತಾ, ಚಂದ್ರಕಲಾ ಇತರರು ಉಪಸ್ಥಿತರಿದ್ದರು. ಕು.ದೀಕ್ಷಾ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಯೂನಿಯನ್ ಕಾರ್ಬೈಡ್ ತ್ಯಾಜ್ಯ ವಿಲೇವಾರಿ

### ಪೀತಂಪುರದಲ್ಲಿ ಪ್ರತಿಭಟನೆ ; ಇಬ್ಬರಿಂದ ಆತ್ಮಾಹುತಿ ಯತ್ನ

ಧರ್ (ಮಧ್ಯಪ್ರದೇಶ), ಜ. 3- ಮಧ್ಯಪ್ರದೇಶದ ಪೀತಂಪುರದಲ್ಲಿ ಯೂನಿಯನ್ ಕಾರ್ಬೈಡ್ ಕಂಪನಿಯ 337ನೇ ಟನ್ ವಿಷಕಾರಿ ತ್ಯಾಜ್ಯ ವಿಲೇವಾರಿ ಮಾಡುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗಿದೆ. ಇಬ್ಬರು ಆತ್ಮಾಹುತಿ ಯತ್ನ ನಡೆಸಿದ್ದಾರೆ.

ಪೀತಂಪುರ ಬಚಾವೋ ಸಮಿತಿ ಪ್ರತಿಭಟನೆ ಆಯೋಜಿಸಿತ್ತು. ಪ್ರತಿಭಟನೆಯ ವೇಳೆ ಇಬ್ಬರು ವ್ಯಕ್ತಿಗಳು ತೈಲ ಸುರಿದುಕೊಂಡು ಆತ್ಮಾಹುತಿಗೆ ಯತ್ನ ನಡೆಸಿದರು. ಜೊತೆಯಲ್ಲಿದ್ದ ಪ್ರತಿಭಟನಾಕಾರರು ಈ ಪ್ರಯತ್ನವನ್ನು ತಪ್ಪಿಸಿದ್ದಾರೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ.

ವಿಷಕಾರಿ ತ್ಯಾಜ್ಯವನ್ನು ಪೀತಂಪುರದಲ್ಲಿ ವಿಲೇವಾರಿ ಮಾಡುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಸ್ಥಳೀಯರು ವಾದಿಸುತ್ತಿದ್ದಾರೆ.

## ಮಕ್ಕಳ ಚಿತ್ರಕಲಾ ತರಗತಿಗಳ ಉದ್ಘಾಟನೆ

**ನಗರದಲ್ಲಿ ಇಂದು**

ದಾವಣಗೆರೆ ಕಲಾ ಪರಿಷತ್ ವತಿಯಿಂದ ಚಿತ್ರಕಲಾ ಪ್ರದರ್ಶನ ಮತ್ತು ಮಕ್ಕಳ ಚಿತ್ರಕಲಾ ತರಗತಿಗಳ ಉದ್ಘಾಟನೆ ಕಾರ್ಯಕ್ರಮವು ಪರಿಷತ್ತಿನ ಕಚೇರಿಯಲ್ಲಿ ಇಂದು ಸಂಜೆ 5:30ಕ್ಕೆ ನಡೆಯಲಿದೆ.

ಹೊನ್ನಾಳಿ ಹಿರೇಕಲ್ಮಠದ ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ದೃಶ್ಯ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಯರಾಜ ಚಿಕ್ಕ ಪಾಟೀಲ್ ಕಲಾ ಪ್ರದರ್ಶನದ ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸಂಸ್ಕಾರ ಭಾರತಿ ಜಿಲ್ಲಾ ಸಮಿತಿ ಗೌರವಾಧ್ಯಕ್ಷ ಡಾ. ಆರ್ ಎಲ್. ಉಮಾಶಂಕರ್ ಪಾಲ್ಗೊಳ್ಳಲಿದ್ದು, ಪ್ರತಿಮಾ ಸಭಾದ ಅಧ್ಯಕ್ಷ ಬಾ.ಮ. ಬಸವರಾಜಯ್ಯ ಚಿತ್ರಕಲಾ ತರಗತಿಗಳಿಗೆ ಚಾಲನೆ ನೀಡಲಿದ್ದಾರೆ.




## ಕ್ರೀಡಾಪಟು ವೈಭವ್ ಜಿ. ಅವರಿಗೆ ಬಂಗಾರದ ಪದಕ

ದಾವಣಗೆರೆ, ಜ. 3 - ಕಳೆದ ವಾರ ಉತ್ತರಪ್ರದೇಶದ ಲಕ್ನೋದಲ್ಲಿ ಎಂ. ಆರ್. ಜೈಪುರಿಯಾಗೋಲ್ ಕ್ಯಾಂಪಸ್ ನಲ್ಲಿ ನಡೆದ ರಾಷ್ಟ್ರಮಟ್ಟದ 15 ನೇ ನ್ಯಾಷನಲ್ ಇಂಡೋರ್ ಆರ್ಚರಿ ಚಾಂಪಿಯನ್ ಷಿಪ್ ನಲ್ಲಿ 7 ನೇ ತರಗತಿ ಓದುತ್ತಿರುವ ಕುಮಾರ ವೈಭವ್ . ಜಿ. ಬಂಗಾರದ ಪದಕ ಪಡೆದು ನಗರಕ್ಕೆ ಕೀರ್ತಿ ತಂದಿದ್ದಾರೆ. ಇವರು ನಗರದ ಖ್ಯಾತ ನೇತ್ರ ತಜ್ಞರಾದ ಡಾ. ಸುನಿಲ್ ಜ. ಹಾಗೂ ಡಾ. ಅಶ್ವಿನಿಯವರ ಸುಪುತ್ರರು. ಬಂಗಾರದ ಪದಕ ಪಡೆದ ಕು.ವೈಭವ್ ಜಿ ಹಾಗೂ ತರಬೇತಿ ನೀಡಿದ ಹೆಚ್.ಎಸ್. ಅನಿಲ್ ಕುಮಾರ್ ರವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ನಗರದಲ್ಲಿ ಇಂದಿನಿಂದ 1 ತಿಂಗಳ ರಾಜ್ಯ ಮಟ್ಟದ ಬಾಲಕಿಯರ ಫುಟ್ಬಾಲ್ ಪಂದ್ಯಾವಳಿ



ದಾವಣಗೆರೆ, ಜ. 3- ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ವತಿಯಿಂದ ಕ್ರೀಡೆಗಳ ಮೂಲಕ ಶಾಲಾ ಬಾಲಕಿಯರ ಸಬಲೀಕರಣಕ್ಕಾಗಿ ಖೇಲೋ ಇಂಡಿಯಾ ಅಡಿಯಲ್ಲಿ ನಗರದ ಲೂರ್ಡ್ಸ್ ಬಾಯ್ಸ್ ಸ್ಕೂಲ್ ಆವರಣದಲ್ಲಿ ನಾಳೆ ದಿನಾಂಕ 4 ರಿಂದ ಒಂದು ತಿಂಗಳ ಕಾಲ ರಾಜ್ಯಮಟ್ಟದ ಬಾಲಕಿಯರ ಫುಟ್ಬಾಲ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

13 ವರ್ಷದೊಳಗಿನ ಬಾಲಕೀಯರ ವಿಭಾಗದಲ್ಲಿ ನಡೆಯುವ ಪಂದ್ಯಾವಳಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 200 ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಲಿದ್ದಾರೆ.

ಕ್ರೀಡಾಪಟುಗಳಿಗೆ ವಸತಿ, ಊಟೋಪಚಾರ ವ್ಯವಸ್ಥೆ ಕಲ್ಪಿಸಲಾಗುವುದು. ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಪ್ರಥಮ 50 ಸಾವಿರ, ದ್ವಿತೀಯ 30 ಸಾವಿರ, ತೃತೀಯ ಪಾರಿತೋಷಕವನ್ನು ಬಹುಮಾನವಾಗಿ ಕೊಡಲಿದ್ದಾರೆ.

ಅಂದು ಮಧ್ಯಾಹ್ನ 1 ಕ್ಕೆ ಪಂದ್ಯಾವಳಿಗಳ ಉದ್ಘಾಟನೆಯನ್ನು ಎಸ್.ಎಸ್. ಕೇರ್ ಟ್ರಸ್ಟ್ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ. ದಾವಣಗೆರೆ ಫುಟ್ಬಾಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಸ್ಪಿ ಉಮಾ ಪ್ರಶಾಂತ್, ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಕ್ರೀಡಾ ಮತ್ತು ಯುವಜನ ಸಬಲೀಕರಣ ಇಲಾಖೆಯ ಸಹಾಯಕ ನಿರ್ದೇಶಕರು, ಪಾಲಿಕೆ ಅಧಿಕಾರಿಗಳು, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ ಮಾಲತೇಶರಾವ್ ಜಾಧವ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಗಣೇಶ್ ಹುಲ್ಲಮ್ನಿ, ಸುಧಾ ಇಟ್ಟಿಗುಡಿ ಮಂಜುನಾಥ್, ಆಶಾ ಉಮೇಶ್, ಮೀನಾಕ್ಷಿ ಜಗದೀಶ್, ಮುಖಂಡರಾದ ಕೆ. ಜಿ. ಶಿವಕುಮಾರ್, ಅಯೂಬ್ ಪೈಲ್ವಾನ್ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎ. ಮುಜಾಹಿದ್ ಖಾನ್, ಎಸ್.ಕೆ. ಚಂದ್ರಶೇಖರ್, ವನಜಾಕ್ಷಿ, ಸೌರಭ್ ಐಗೂರು, ಯುವರಾಜ್, ವಂದನ, ನಿಸರ್ಗ ಮತ್ತಿತರರಿದ್ದರು.

**ಓದುಗರ ಪತ್ರ**

## ಖಾಲಿ ನಿವೇಶನ ಸ್ವಚ್ಛಗೊಳಿಸಿ, ಬೀದಿ ದೀಪ ಸರಿಪಡಿಸಿ..!

ಮಾನ್ಯರೇ,

ಇಲ್ಲಿನ ಸರಸ್ವತಿ ನಗರದ 'ಎ ಬ್ಲಾಕ್, 3ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆಯಲ್ಲಿನ ಖಾಲಿ ನಿವೇಶನದಲ್ಲಿ ಕಸ-ಕಡ್ಡಿ ತುಂಬಿಕೊಂಡಿರುವುದರಿಂದ ಅಲ್ಲಿ ಹುಳ-ಹುಪ್ಪಡಿಗಳ ಕಾಟ ಹೆಚ್ಚಾಗಿದೆ.

ಇಲ್ಲಿನ ಒಂದು ಕಂಬದಲ್ಲಿ ಬೀದಿ ದೀಪ ಹಾಳಾಗಿದ್ದು, ರಾತ್ರಿಯಾದರೆ ಸಾಕು ಹಾವು-ಚೇಳುಗಳ ಭಯ ಕಾಡುತ್ತಿದೆ. ಮಕ್ಕಳು, ವೃದ್ಧರು ರಾತ್ರಿ ವೇಳೆ ಹೊರಗೆ ಬರಲು ಹೆದರುವ ಪ್ರಸಂಗ ಎದುರಾಗಿದೆ.

ಈ ಹಿಂದೆ ಒಮ್ಮೆ ಸಂಬಂಧಿಸಿದ ಇಲಾಖೆಗೆ ಈ ಬಗ್ಗೆ ದೂರು ನೀಡಿದ್ದರೂ ಸಹ ಅವರು ಮೌನದಿಂದಿದ್ದಾರೆ. ಅಧಿಕಾರಿಗಳು ಈ ಧೋರಣೆ ತೊರೆದು, ಕೂಡಲೇ ಇಲ್ಲಿನ ನಿವೇಶನ ಸ್ವಚ್ಛಗೊಳಿಸುವ ಜೊತೆಗೆ ಬೀದಿ ದೀಪ ದುರಸ್ತಿಗೊಳಿಸಬೇಕು.

- ಡಾ.ಎನ್.ಪಿ ಸುರೇಂದ್ರನಾಥ್.
ಸ್ಥಳೀಯ ನಿವಾಸಿ
- ವೈ. ವಾದಿರಾಜ್ ಭಟ್., ವಕೀಲರು, ದಾವಣಗೆರೆ

## ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಯಲು ತಾತ್ಕಾಲಿಕ ಸಿಸಿ ಕ್ಯಾಮೆರಾ ಅಳವಡಿಸಿ..!

ಮಾನ್ಯರೇ,

ನಗರದ ಸ್ವಚ್ಛತೆಗಾಗಿ ದೊಡ್ಡ ಮಟ್ಟದಲ್ಲಿ ಪೌರ ಕಾರ್ಮಿಕ ಸಿಬ್ಬಂದಿ ನಿತ್ಯವೂ ಶ್ರಮಿಸುತ್ತಿದ್ದಾರೆ. ನಗರದ ದಶಕದ ಹಿಂದಿನ ದಿನಗಳನ್ನು ಕಂಡಿದ್ದವರಿಗೆ ಇಂದು ದಾವಣಗೆರೆ ನಗರ ಮಾದರಿ ನಗರವಾಗಿ ರೂಪುಗೊಳ್ಳಲು ಹೆಜ್ಜೆ ಇಡುತ್ತಿದೆ ಎಂಬುದು ಅರ್ಥವಾಗುತ್ತದೆ.

ಪ್ರತಿ ದಿನ ಮನೆ, ಹೋಟೆಲ್ ಹಾಗೂ ಅಂಗಡಿ ಮುಂಗಟ್ಟುಗಳಿಂದ ಉತ್ಪತ್ತಿಗೊಳ್ಳುವ ಕಸವನ್ನು ಕ್ರಮ ಬದ್ಧವಾಗಿ ಸ್ವೀಕರಿಸಿ, ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದಾರೆ. ಈ ತರಹ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ದಾವಣಗೆರೆ ಜನತೆ ಅಭಿನಂದಿಸಲೇ ಬೇಕು.

ಪಾಲಿಕೆಯು ಕಸ ವಿಲೇವಾರಿ ಮಾಡಲು ಅಚ್ಚುಕಟ್ಟಾಗಿ ವ್ಯವಸ್ಥೆ ರೂಪಿಸಿದ್ದರೂ ನಗರದಲ್ಲಿನ ಕೆಲವರು ಇನ್ನೂ ಎಲ್ಲೆಂದರಲ್ಲಿ ಕಸ ಎಸೆದು ಹೋಗುತ್ತಿರುವುದು ಸರಿಯಲ್ಲ.

ಎಲ್ಲೆಂದರಲ್ಲಿ ಅಕ್ರಮವಾಗಿ ಕಸ ಎಸೆಯುವುದನ್ನು ತಡೆಯಲು ಪಾಲಿಕೆಯ ಅಧಿಕಾರಿಗಳು ಕೂಡಲೇ ತಾತ್ಕಾಲಿಕ ಸಿ.ಸಿ ಕ್ಯಾಮೆರಾ ಮತ್ತು ಡ್ರೋನ್ ಕ್ಯಾಮೆರಾ ಮೂಲಕ ಅಂತಹವರನ್ನು ಸೆರೆಹಿಡಿದು ದಂಡ ಹಾಕಲು ಮುಂದಾಗಬೇಕು.

- ವೈ. ವಾದಿರಾಜ ಭಟ್, ವಕೀಲರು, ದಾವಣಗೆರೆ.

# ಪ್ರಿಯಾಂಕ್ ಖರ್ಗೆ ವಿರುದ್ಧದ ಆರೋಪ ಸಲ್ಲದು

ದಾವಣಗೆರೆ, ಜ. 3- ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಕೇವಲ ರಾಜಕೀಯ ದ್ವೇಷದಿಂದ ಆರೋಪ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಅವರ ಯಾವುದೇ ಪಾತ್ರ ಇಲ್ಲ. ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಬರೆದಿರುವ ಡೆತ್ ನೋಟ್‌ನಲ್ಲೂ ಹೆಸರಿಲ್ಲ. ಆದರೂ ಅವರು ದಲಿತರು ಎಂಬ ಕಾರಣಕ್ಕಾಗಿ ಪ್ರಿಯಾಂಕ್ ಖರ್ಗೆಯವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಕಿಡಿಕಾರಿದರು.

ವಾಸ್ತವವಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಚಿನ್ ಗುತ್ತಿಗೆದಾರರೇ ಅಲ್ಲ. ಉತ್ತರ ಕರ್ನಾಟಕ ಭಾಗದವರು ಗುತ್ತಿಗೆದಾರರಾಗಲು ಧಾರವಾಡದಲ್ಲಿನ ಲೋಕೋಪಯೋಗಿ, ಪಂಚಾಯತ್ ರಾಜ್ ಇಲಾಖೆಯ ಮುಖ್ಯ ಅಧೀಕ್ಷಕರ ಕಚೇರಿಯಲ್ಲಿ ನೋಂದಣಿ ಮಾಡಿಸಬೇಕು. ಸಚಿನ್ ಎಲ್ಲಿಯೂ ನೋಂದಣಿ ಮಾಡಿಸಿಲ್ಲ. ಹಾಗಾಗಿ ಅವರು ಗುತ್ತಿಗೆದಾರ ಅಲ್ಲ ಎಂಬುದು ಗೊತ್ತಾಗಿದೆ ಎಂದರು.

ರಾಜ್ಯದಲ್ಲಿ ಏನೇ ಪ್ರಕರಣ ನಡೆದರೂ ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಬಿಜೆಪಿಯವರು ಹೋರಾಟ ಮಾಡುತ್ತಾರೆ. ಸಿಬಿಐನವರು ಏನಾದರೂ ಬಿಜೆಪಿ ಬಂಧುಗಳಾ ಎಂದು ಲೇವಡಿ ಮಾಡಿದರು. ಬಿಜೆಪಿ ಒಂಭತ್ತು ವರ್ಷಗಳ ಕಾಲ ರಾಜ್ಯದಲ್ಲಿ ಅಧಿಕಾರ ನಡೆಸಿದರೂ ಒಂದೇ ಒಂದು ಪ್ರಕರಣವನ್ನು ಸಿಬಿಐಗೆ ವಹಿಸಿಲ್ಲ ಎಂದು ದೂರಿದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಪೋಕ್ಸೋ ಪ್ರಕರಣದ ವಿಚಾರಣೆ ನಡೆಯುತ್ತಿರುವಾಗ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ. ವಿಜಯೇಂದ್ರ ಮತ್ತು ಯತ್ನಾಳ್ ನಡುವೆ ನಡೆಯುತ್ತಿರುವ ಮುಸುಕಿನ ಗುದ್ದಾಟ ಮುಚ್ಚಿ ಹಾಕಲು ಪ್ರಿಯಾಂಕ ಖರ್ಗೆಯವರ ಮುಖಕ್ಕೆ ಮಸಿ ಬಳಿಯುವ ಷಡ್ಯಂತ್ರ ಮಾಡುತ್ತಿದ್ದಾರೆ. ಪ್ರಿಯಾಂಕ್ ಖರ್ಗೆಯವರು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು. ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜೀನಾಮೆ ಸ್ವೀಕರಿಸಬಾರದು ಎಂದು ಒತ್ತಾಯಿಸಿದರು.

ಬಿಜೆಪಿಯವರಿಗೆ ದಲಿತರು ಎಂದರೆ ಆಗುವುದೇ ಇಲ್ಲ. ಹಾಗಾಗಿ ಪ್ರಿಯಾಂಕ ಖರ್ಗೆಯವರ ವಿರುದ್ಧ ಹೋರಾಡಲು ಬಿಜೆಪಿಯವರು ಟೂಲ್ ಕಿಟ್ ಸಿದ್ಧಪಡಿಸಿದ್ದಾರೆ. ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೊಡುವ ಅಗತ್ಯವೇ ಇಲ್ಲ. ರಾಜೀನಾಮೆ ನೀಡದೆ ಮುಂದುವರಿಯಬೇಕೆಂದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಂ. ಮಂಜುನಾಥ್, ಲಿಯಾಖತ್ ಅಲಿ, ಗುರು ರೇವಣಕರ್, ಪ್ರಭಾಕರ್, ಬಿ.ಹೆಚ್. ಉದಯ್ ಕುಮಾರ್, ಡಿ. ಶಿವಕುಮಾರ್ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸತ್ವ ಸಂಗಮ

ಆತ್ಮಿ ಅಸೋಸಿಯೇಷನ್ ಅರ್ಪಿಸುವ 2ನೇ ಸತ್ವ ಸಂಗಮ ಕಾರ್ಯಕ್ರಮವು ಇಂದು ಸಂಜೆ 5ಕ್ಕೆ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾಭವನದಲ್ಲಿ ನಡೆಯಲಿದೆ.

ನಲ್ಲೂರು ಎಸ್. ರಾಘವೇಂದ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಜಯ್‌ಕುಮಾರ್ ಎಂ. ಸಂತೋಷ್, ಜಿ. ಮಂಜುನಾಥ್, ಬಿ.ಸಿ. ಚಂದ್ರಶೇಖರ್, ಟಿ. ಗಾಯತ್ರಿ, ಕಾತ್ಯಾಯಿನಿ ಸಿ.ಕೆ. ಅನಿಲ್‌ಕುಮಾರ್, ಗಿರೀಶ್ ಹೆಚ್. ಉಪಸ್ಥಿತರಿರವರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಶುಕ್ಲಾಶೆಟ್ಟಿ, ಚಿಂದೋಡಿ ಮಧುಕೇಶ್, ಆರ್.ಜೆ. ನಾಗೇಂದ್ರ ಪ್ರಕಾಶ್ ಅವರುಗಳಿಗೆ ಆತ್ಮಿಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

## ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಇಂದು

ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಾಲಾ ವಾರ್ಷಿಕೋತ್ಸವ, ಬಹುಮಾನ ವಿತರಣಾ ಸಮಾರಂಭ ವನ್ನು ಇಂದು ಸಂಜೆ 4ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮ ಅಧ್ಯಕ್ಷತೆಯನ್ನು ಮಂಜಪ್ಪ ಕೆ.ಎಂ. ದಿ ಟೀಮ್ ಅಕಾಡೆಮಿಯ ಚೇರ್ಮನ್, ಮುಖ್ಯ ಅತಿಥಿಗಳಾಗಿ ಎಸ್.ವಿ.ವಿ.ಆರ್. ನಾಗಭೂಷಣಂ, ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಮುಖ್ಯೋಪಾಧ್ಯಾಯ ಪರಮೇಶ್ವರಪ್ಪ ಬಿ. ಉಪಸ್ಥಿತರಿರುವರು.

## ವಿಕಲಚೇತನ ಫಲಾನುಭವಿಗಳಿಗೆ ರಿಯಾಯಿತಿ ದರದ ಬಸ್ ಪಾಸ್

ದಾವಣಗೆರೆ, ಜ. 3 - ವಿಕಲಚೇತನ ಫಲಾನುಭವಿಗಳು ರಿಯಾಯಿತಿ ದರದ ಬಸ್‌ಪಾಸ್ (ಹೊಸ, ನವೀಕರಣ) ಗಳನ್ನು ಪಡೆಯಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸೇವಾ ಸಿಂಧು ಪೋರ್ಟಲ್ ನಲ್ಲಿ w ನಲ್ಲಿ ಘಟಕ ವ್ಯವಸ್ಥಾಪಕರ ಕೌಂಟರ್ (ಐಡಿ) ಗೆ ಅರ್ಜಿ ಸಲ್ಲಿಸಬಹುದು ಮತ್ತು ಹೊಸ ಪಾಸ್‌ಗಳನ್ನು ಪಡೆಯಲು ವಿಭಾಗೀಯ ನಿಯಂತ್ರಣಾಧಿಕಾರಿಗಳು ದಾವಣಗೆರೆ ವಿಭಾಗ ರವರ ಕೌಂಟರ್ (ಐಡಿ) ಗೆ ಅರ್ಜಿ ಸಲ್ಲಿಸಬೇಕು.

**ಪಾಸ್ ನವೀಕರಣ ಮಾಡಿಸಿಕೊಳ್ಳುವ ವಿತರಣಾ ಕೇಂದ್ರ :** ಜನವರಿ 1 ರಿಂದ ಫೆಬ್ರವರಿ 28 ರವರೆಗೆ ದಾವಣಗೆರೆ ಬಸ್ ನಿಲ್ದಾಣದಲ್ಲಿ ದಾವಣಗೆರೆ, ಜಗಳೂರು, ಚನ್ನಗಿರಿ ಫಲಾನುಭವಿಗಳು ನವೀಕರಣ ಮಾಡಿಸಿಕೊಳ್ಳಬಹುದು. ಹರಿಹರ ಬಸ್ ನಿಲ್ದಾಣದಲ್ಲಿ ಹರಿಹರ ಫಲಾನುಭವಿಗಳು ಪಾಸ್ ನವೀಕರಣ ಮಾಡಿಸಿಕೊಳ್ಳಬಹುದು ಎಂದು ಕ.ರಾ.ರ.ಸಾ. ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

## ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿದಾರರಾದ **ಶ್ರೀಮತಿ ನಜೀಮಾ ಬೇಗಂ ಕೋಂ. ದಿ|| ಮಹಮ್ಮದ್ ಮಕ್ಬೂಲ್** ಹಾಗೂ ಮಕ್ಕಳಾದ **ಶ್ರೀ ದಾವೂದ್ ಅನ್ಸಾರಿ** ಹಾಗೂ **ಶ್ರೀ ಸಲ್ಮಾನ್ ಅನ್ಸಾರಿ** ಇವರುಗಳು ಷೆಡ್ಯೂಲ್ ಮನೆಯ ಬಾಬ್ತು ಮೂಲಕ ಹಕ್ಕುಳ್ಳವರಾಗಿದ್ದು, ಬಹುಕಾಲದಿಂದ ವಾಸಿಸುತ್ತಿದ್ದಾರೆ. ನಮ್ಮ ಕಕ್ಷಿಗಾರರಿಗೂ ಹಾಗೂ **ದಿ|| ಮಕ್ಬೂಲ್** ರವರ ತಾಯಿಯಾದ **ಶ್ರೀಮತಿ ಪ್ಯಾರಿ ಬೇಗಂ, ಮುಂಬೈ** ನಗರವಾಸಿಯಾಗಿದ್ದು, ಷೆಡ್ಯೂಲ್ ಸೊತ್ತನ್ನು ಖುದ್ದಾಗಿ ಅಥವಾ ಪವರ್ ಆಫ್ ಅಟಾರ್ನಿ ಮೂಲಕ ಮಾರಾಟ ಮಾಡಿ, ನಮ್ಮ ಕಕ್ಷಿಗಾರರನ್ನು ಷೆಡ್ಯೂಲ್ ಮನೆಯಿಂದ ಕಾನೂನು ಬಾಹಿರವಾಗಿ ಒಕ್ಕಲೆಬ್ಬಿಸಿಲು ಪ್ರಯತ್ನಿಸುತ್ತಿದ್ದಾರೆ ಮತ್ತು ನಮ್ಮ ಕಕ್ಷಿದಾರರ ಹಕ್ಕಿಗೆ ಚ್ಯುತಿ ಉಂಟುಮಾಡಲು ಹವಣಿಸುತ್ತಿದ್ದಾರೆ. ಕಾರಣ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ 'ಷೆಡ್ಯೂಲ್ ಆಸ್ತಿಯನ್ನು ಖರೀದಿಸಲು ಹವಣಿಸುತ್ತಿರುವವರೇ ಎಚ್ಚರಿಕೆ' ಹಾಗೂ ಈ ಬಗ್ಗೆ ಮುಂದೆ ನಮ್ಮ ಕಕ್ಷಿಗಾರರ ಸ್ವಾಧೀನಾನುಭವಕ್ಕೆ ತೊಂದರೆ ಮಾಡಿದಲ್ಲಿ ಮುಂದಾಗುವ ಖರ್ಚುವೆಚ್ಚಗಳಿಗೆ ನೀವೇ ಬಾಧ್ಯರಾಗುತ್ತೀರಿ.

**ಷೆಡ್ಯೂಲ್ :** ನೆರೆಕೆಯ ಮನೆ ಡೋರ್ ನಂ. 1226, 2ನೇ ಮುಖ್ಯರಸ್ತೆ, 6ನೇ ತಿರುವು, ಕೆಟಿಜೆ ನಗರ, ದಾವಣಗೆರೆ ಮತ್ತು ಇದರ ಚಕ್ಕುಬಂದಿ :
**ಪೂರ್ವಕ್ಕೆ :** ಚಮನ್ ಬಿ ಮನೆ, **ಪಶ್ಚಿಮಕ್ಕೆ :** ಶ್ರೀಧರ ನಾಯಕ್ ಮನೆ,
**ಉತ್ತರಕ್ಕೆ :** ಕನ್ಸರ್‌ವೆನ್ಸಿ ಹಾಗೂ **ದಕ್ಷಿಣಕ್ಕೆ :** ರಸ್ತೆ.

ದಿನಾಂಕ : 02-01-2025
ಸ್ಥಳ : ದಾವಣಗೆರೆ.

ಸಹಿ/-
ನಾಜೀಮ ಬಾನು
ಒಂದನೇ ಕಕ್ಷಿದಾರಳು

ಸಹಿ/-
ಜಗದೀಶ್ ಹಿರೇಮಠ
ನ್ಯಾಯವಾದಿಗಳು
ಮೊ. : 98441 88770

## ಕೊಕ್ಕನೂರು ಶಾಲೆಗೆ ಲೋಟ ಕೊಡುಗೆ




ಮಲೇಬೆನ್ನೂರು, ಜ. 3 - ಕೊಕ್ಕನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಶ್ರೀ ಕ್ಷೇತ್ರ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ 240 ತಟ್ಟೆ ಹಾಗೂ ಲೋಟಗಳನ್ನು ಮತ್ತು ಕೊಕ್ಕನೂರು ಹಾಲು ಉತ್ಪಾದಕರ ಸಂಘದವರು ತಟ್ಟೆಸ್ಟ್ಯಾಂಡನ್ನು ಶುಕ್ರವಾರ ಕೊಡುಗೆಯಾಗಿ ನೀಡಿದರು.

ಈ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಡಿ.ಎಲ್. ನಾಗರಾಜ್, ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕ ಹನುಮಂತರಾಯರು, ಎಕೆಸಿ ಶಾಲಾ ಮುಖ್ಯ ಶಿಕ್ಷಕ ಮರುಳಸಿದ್ದಪ್ಪ, ಕಮಲಾಕರ್, ಬೀರಲಿಂಗೇಶ್ವರ ಶಾಲೆಯ ಮುಖ್ಯ ಶಿಕ್ಷಕ ನಾಗೇಂದ್ರಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ಕಾನೂನು ಪದವೀಧರರಿಗೆ ತರಬೇತಿ ಭತ್ಯೆ

ದಾವಣಗೆರೆ, ಜ. 3 - ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ಭತ್ಯೆ ನೀಡಲು ಅರ್ಹ ಕಾನೂನು ಪದವೀಧರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ - 577006 ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು ಸಲ್ಲಿಸಬೇಕು.

॥ ವಂದೇ ಗೋಮಾತರಮ್ ॥
ನೀವು **ಕ್ಯಾನ್ಸರ್ ಸಮಸ್ಯೆಯಿಂದ** ಬಳಲುತ್ತಿದ್ದೀರಾ...?
ಹೆದರಬೇಡಿ, ಧೈರ್ಯದಿಂದ ಎದುರಿಸಿ
**ಅನ್ವಯ ಆಯುರ್ವೇದ ಆಸ್ಪತ್ರೆ**
**ಗೋಸೇವಾ ಗತಿವಿಧಿ ಕರ್ನಾಟಕ**
ಹಾಗೂ
**ಮಾ ಗೋ ಪ್ರಾಡಕ್ಟ್ಸ್ ಪ್ರೈ. ಲಿ.**
ಇವರ ಸಂಯುಕ್ತ ಆಶ್ರಯದಲ್ಲಿ

**ಕ್ಯಾನ್ಸರ್‌ಗೆ ಪಂಚಗವ್ಯ ಆಧಾರಿತ ಆಯುರ್ವೇದ ಚಿಕಿತ್ಸೆ ಮತ್ತು ಸಮಾಲೋಚನಾ ಶಿಬಿರ**
ನಡೆಸಿಕೊಡುವವರು :
**ಡಾ|| ಎನ್. ದರ್ಶನ್ ಬಾಬು**
BAMS., MD., Ph.D(Sch), CCNF., DNHE., FAGE., PGD(YOGA), PGCAC, PGDM(HM)
ನಿರ್ದೇಶಕರು, ಅನ್ವಯ ಆಯುರ್ವೇದ ಆಸ್ಪತ್ರೆ
ಹಾಗೂ
ಪಂಚಗವ್ಯ ಚಿಕಿತ್ಸೆಯಲ್ಲಿ 25 ವರ್ಷಗಳ ಸುದೀರ್ಘ ಅನುಭವ ಹೊಂದಿರುವ
"ಆನ್ಸರ್ ಫಾರ್ ಕ್ಯಾನ್ಸರ್" ಖ್ಯಾತಿಯ
**ಡಾ|| ಡಿ.ಪಿ. ರಮೇಶ್**
ದಿನಾಂಕ : 07-01-2025 ಮಂಗಳವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ
ಸ್ಥಳ : ಅನ್ವಯ ಆಯುರ್ವೇದ ಆಸ್ಪತ್ರೆ 1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ - 577004
**ಸಂಪರ್ಕ ಸಂಖ್ಯೆ : 08192 - 252228 / 86186 42929**
ಸೂಚನೆ : ▪ ಈ ಶಿಬಿರದಲ್ಲಿ ವೈದ್ಯರ ತಪಾಸಣೆ ಉಚಿತ, ಔಷಧಿಗೆ ಮಾತ್ರ ಹಣ ಪಾವತಿಸುವುದು.
▪ ಬರುವಾಗ ನಿಮ್ಮ ಹಳೆಯ ವೈದ್ಯಕೀಯ ತಪಾಸಣಾ ದಾಖಲೆಗಳನ್ನು ತನ್ನಿರಿ
▪ ಇಲ್ಲಿ ಪ್ರತೀ ತಿಂಗಳ 7ನೇ ತಾರೀಖು ಶಿಬಿರ ನಡೆಯಲಿದೆ.

## ನಗರಕ್ಕೆ ನಾಳೆ ಸಿಎಂ ಸಿದ್ದರಾಮಯ್ಯ



ದಾವಣಗೆರೆ, ಜ. 3 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡಿದ್ದು ದಿನಾಂಕ 5 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಿಂದ ಹೆಲಿಕ್ಯಾಪ್ಟರ್ ಮೂಲಕ ನಗರದ ಬಾಪೂಜಿ ಎಂಬಿಎ ಮೈದಾನಕ್ಕೆ ಆಗಮಿಸುವರು. ನಂತರ ಬೆಳಗ್ಗೆ 11.30 ಕ್ಕೆ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯಿಂದ ಎಂಬಿಎ ಮೈದಾನದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಯುವಜನೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

ಮಧ್ಯಾಹ್ನ 1 ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿ ಕುರುಬ ಸಮಾಜ ಹಾಗೂ ಅಭಿಮಾನಿ ಬಳಗದಿಂದ ಆಯೋಜಿಸಿರುವ 537ನೇ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಸಂಜೆ 4 ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

## ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ಸರಬರಾಜು ವ್ಯತ್ಯಯ

ರಾಣೇಬೆನ್ನೂರು, ಜ. 03 - ರಾಣೇಬೆನ್ನೂರು ಪಟ್ಟಣದ ಗೌರಿಶಂಕರ ನಗರ, ರಾಜೇಶ್ವರಿ ನಗರ, ಮೆಡ್ಲೇರಿ ರಸ್ತೆ, ಹುಣಸಿಕಟ್ಟಿ ರಸ್ತೆ, ಹೌಸಿಂಗ್ ಕಾಲೋನಿ, ವಾಗೀಶ ನಗರ, ಚೌಡೇಶ್ವರಿ ನಗರ, ಗ್ರಾಮೀಣ ಭಾಗವಾದ ಗಂಗಾಜಲ ತಾಂಡಾ, ಬಸಲಿಕಟ್ಟಿ ತಾಂಡಾ, ಸಿದ್ದಾಪುರ ತಾಂಡಾ, ಗೋವಿಂದ ಬಡಾವಣೆ, ಫಾರೆಸ್ಟ ಐ.ಬಿ, ಇಂಟೋ ಅಮೆರಿಕನ್ ಸೀಡ್ಸ್ & ಬನಶಂಕರಿ ಐ.ಟಿ. ಕಾಲೇಜ್‌ಗಳಿಗೆ ದಿನಾಂಕ 5.1.2025ರ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದ ವೆಂಕಟೇಶ್ವರ ದೇವಸ್ಥಾನದಲ್ಲಿ 10ರಂದು ವೈಕುಂಠ ಏಕಾದಶಿ ಉತ್ಸವ

ದಾವಣಗೆರೆ, ಜ. 3- ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇದೇ ದಿನಾಂಕ 10ರ ಶುಕ್ರವಾರ ವೈಕುಂಠ ಏಕಾದಶಿ ಮಹೋತ್ಸವ ಮಹೋತ್ಸವ ನಡೆಯಲಿದೆ. ಮುಂಜಾನೆ 6ರಿಂದ ರಾತ್ರಿ 10 ರವರೆಗೆ ಶ್ರೀ ಸ್ವಾಮಿಯ ಅಖಂಡ ದರ್ಶನ ಮತ್ತು ಸರ್ವ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ ಎಂದು ದೇವಸ್ಥಾನದ ಪ್ರಧಾನ ಟ್ರಸ್ಟಿ ಎಂ.ಎನ್. ರಾಮ್‌ಮೋಹನ್ ತಿಳಿಸಿದ್ದಾರೆ.

## ಆರ್.ಟಿ. ಪ್ರಶಾಂತ್ ಅವರಿಗೆ ಪ್ರಶಸ್ತಿ



ದಾವಣಗೆರೆ, ಜ. 3 - ಶ್ರೀಮತ್ ಕಾಶಿ ಮಹಾಪೀಠದ ವತಿಯಿಂದ ನೀಡಲಾಗುವ 'ಧರ್ಮ ವಿಭೂಷಣ' ಪ್ರಶಸ್ತಿಯನ್ನು ಕಾಶಿ ಪೀಠದ ಹಿರಿಯ ಜಗದ್ಗುರುಗಳವರು ಹರಿಹರದ ಶ್ರೀ ಜಗದ್ಗುರು ಪಂಚಾಚಾರ್ಯ ವಿಶ್ವಧರ್ಮ ವಿದ್ಯಾಪೀಠದ ಕಾರ್ಯದರ್ಶಿಗಳೂ, ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೂ ಆದ ಆರ್.ಟಿ.ಪ್ರಶಾಂತ್ ದುಗ್ಗತ್ತಿಮಠ್ ಅವರಿಗೆ ನೀಡಿ ಆಶೀರ್ವದಿಸಿದರು.

## ಹೊಸ ದೇಶಗಳನ್ನು ರೂಪಿಸುವುದರಿಂದ ಚೀನಾ ಆಕ್ರಮಿತ ಪ್ರದೇಶಗಳಿಗೆ ಮಾನ್ಯತೆ ಸಿಗದು : ಭಾರತ

ನವದೆಹಲಿ, ಜ.3- ಹೊಟನ್ ವಲಯದಲ್ಲಿ ಎರಡು ಹೊಸ ದೇಶಗಳನ್ನು ರೂಪಿಸುವ ಚೀನಾದ ಕ್ರಮಕ್ಕೆ ಭಾರತ ಪ್ರತಿಭಟನೆ ದಾಖಲಿಸಿದ್ದು, ಹೊಸ ದೇಶಗಳನ್ನು ರೂಪಿಸುವುದರಿಂದ ಅಕ್ರಮಿತ ಪ್ರದೇಶಗಳಿಗೆ ಮಾನ್ಯತೆ ದೊರೆಯುವುದಿಲ್ಲ ಎಂದು ತಿಳಿಸಿದೆ. ಚೀನಾ ಹೊಸದೆಂದು ಹೇಳುತ್ತಿರುವ ದೇಶಗಳು ಭಾರತದ ಕೇಂದ್ರಾಡಳಿತ ಪ್ರದೇಶವಾದ ಲಡಾಕ್‌ನಲ್ಲಿ ಬರುತ್ತವೆ. ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಭಾರತದ ಸಾರ್ವಭೌಮತ್ವದ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ಈ ಎರಡೂ ದೇಶಗಳ ಪ್ರತಿನಿಧಿಗಳು ಚೀನಾದ ಜೊತೆ ಐದು ವರ್ಷಗಳ ನಂತರ ಗಡಿ ಮಾತುಕತೆ ಪುನರಾರಂಭಿಸಿದ್ದಾರೆ.

## ಹರಿಹರದಲ್ಲಿ ಇಂದು ನೀರು ಸರಬರಾಜು ವ್ಯತ್ಯಯ


ಹರಿಹರ ಸಮೀಪದ ಕವಲೆತ್ತು ಗ್ರಾಮದ ಹತ್ತಿರ ಇರುವ ಜಾಕವೆಲ್‌ನಲ್ಲಿ ಹೊಸದಾಗಿ ವಿದ್ಯುತ್ ಟ್ರ್ಯಾನ್ಸ್ ಫಾರ್ಮರ್‌ನ ಇನ್ನಕುಮಾರ್ ಕೇಬಲ್ ಅಳವಡಿಸುವ ಕಾಮಗಾರಿ ನಡೆಯುವುದರಿಂದ ಇಂದು ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ 24/7 ಕುಡಿಯುವ ನೀರಿನ ಸರಬರಾಜು ವ್ಯವಸ್ಥೆ ಇರುವುದಿಲ್ಲ ಎಂದು ಜಲಸಿರಿ ಇಲಾಖೆಯ ಅಧಿಕಾರಿ ನವೀನ್ ಕುಮಾರ್ ತಿಳಿಸಿದ್ದಾರೆ.


Aaraike Hospitals

ಕಾವೇರಿ ಹಾಸ್ಪಿಟಲ್ ಇಲೆಕ್ಟ್ರಾನಿಕ್ಸ್ ಸಿಟಿ

ಕೀಲು ಮತ್ತು ಮೂಳೆ, ಮಂಡಿ ಬದಲಾವಣೆ ರಾಜ್ಯದ ಹೆಸರಾಂತ ಹಿರಿಯ ತಜ್ಞ ವೈದ್ಯರು ಇದೀಗ ನಿಮ್ಮ ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

ಈಗ, ನಗರದ ಆರೈಕೆ ಹಾಸ್ಪಿಟಲ್‌ನಲ್ಲಿ ಕಾವೇರಿ ಆರ್ಥೋ ಓಪಿಡಿ



ಸಮಯ: ಸೋಮವಾರ, 6ನೇ ಜನವರಿ, 2025 ಬೆಳಗ್ಗೆ 10.00

ಸ್ಥಳ: ಆರೈಕೆ ಹಾಸ್ಪಿಟಲ್ ಕೆ.ಟಿ.ಜೆ. ನಗರ ನಗರ, ನಿಟ್ಟುವಳ್ಳಿ, ದಾವಣಗೆರೆ - 577002

ನಮ್ಮ ತಜ್ಞ ವೈದ್ಯರನ್ನು ಭೇಟಿಯಾಗಿ



ಡಾ॥ ಬಿ. ಸಿ. ಜಗದೀಶ್
ಹಿರಿಯ ಸಲಹಾದಾರರು, ಕೀಲು ಮತ್ತು ಮೂಳೆ, ಅಪಘಾತ ಮತ್ತು ರೋಬೋಟಿಕ್ ಮಂಡಿ ಬದಲಾವಣೆ ಶಸ್ತ್ರಚಿಕಿತ್ಸಕರು, ಸ್ಪೋರ್ಟ್ಸ್ ಮೆಡಿಸಿನ್
ಎಂಬಿಬಿಎಸ್, ಡಿ ಆರ್ಥೋ, ಎಂಎಸ್ ಆರ್ಥೋ, ಡಿಎನ್‌ಬಿ, ಎಫ್‌ಎಎಸ್‌ಎಮ್ (ಎಸ್‌ಎ)

ಲಭ್ಯವಿರುವ ಸಲಹೆ ಸೇವೆಗಳು
- ನಿರಂತರ ಸಂಧಿ ನೋವು
- ರೋಬೋಟಿಕ್ ಮಂಡಿ ಬದಲಾವಣೆ
- ನಡೆಯಲು ಮತ್ತು ಮೆಟ್ಟಿಲು ಹತ್ತಲು ಕಷ್ಟ
- ಮೂಳೆ ಮುರಿತ ಮತ್ತು ಉಳುಕು
- ಬೆನ್ನು ಅಥವಾ ಕುತ್ತಿಗೆ ನೋವು
- ಕ್ರೀಡಾ ಗಾಯಗಳಿಗೆ ಸೂಕ್ತ ಸಲಹೆ ಮತ್ತು ಚಿಕಿತ್ಸೆ

ಭೇಟಿಗಾಗಿ ಕರೆ ಮಾಡಿ: +91 84315 41487 +91 89040 09574

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ: 080 6801 6801 ಅಥವಾ ಭೇಟಿ ನೀಡಿ: www.kauveryhospitalbangalore.com



ದ್ವಿತೀಯ ಪುಣ್ಯಸ್ಮರಣೆ



ದಿ॥ ಶ್ರೀಮತಿ ಗಂಗಮ್ಮ ಮತ್ತು ದಿ॥ ಶ್ರೀ ಎಸ್.ಬಿ. ಮಹದೇವಪ್ಪನವರ ಮಗ

ಶ್ರೀ ಎಸ್.ಎಂ. ರಾಜಶೇಖರಪ್ಪ

ನಿವೃತ್ತ ಡೆಪ್ಯೂಟಿ ಸೆಕ್ರೆಟರಿ, ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ.

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಕೆ. ಸುಶೀಲ ರಾಜಶೇಖರಪ್ಪ
ಪುತ್ರಿ : ಡಾ॥ ಶಶಿರೇಖಾ ಅಳಿಯ : ಡಾ॥ ಶ್ರೀಹರ್ಷ
ಪುತ್ರ : ಶ್ರೀ ರಾಜು ಸೊಸೆ : ಶ್ರೀಮತಿ ತೇಜಸ್ವಿನಿ ಮತ್ತು
ಶ್ರೀಮತಿ ಪೂರ್ಣಿಮ ಮತ್ತು ಶ್ರೀ ಹರೀಶ್
ಸಹೋದರಿಯರು : ಶ್ರೀಮತಿ ಪ್ರೇಮಾ ಕೊಟ್ರಪ್ಪ,
ಶ್ರೀಮತಿ ಸಾವಿತ್ರಿ ಎಸ್.ಎಸ್. ಪಾಟೀಲ್, ಶ್ರೀಮತಿ ಮಲ್ಲಮ್ಮ ನಾಗರಾಜ್
ಶ್ರೀಮತಿ ರತ್ನಮ್ಮ ಡಾ. ಶಿವನಪ್ಪ, ಮೊಮ್ಮಕ್ಕಳು ಹಾಗೂ ಬಂಧು-ಬಾಂಧವರು



ಚುನಾವಣಾ ಮನವಿ

5 ವರ್ಷಗಳ ಅವಧಿಗೆ ದಿನಾಂಕ 05-01-2025ರ ಭಾನುವಾರದಂದು
ಸಮಯ ಬೆಳಿಗ್ಗೆ 9.00 ರಿಂದ ಸಂಜೆ 4.00 ಘಂಟೆಯವರೆಗೆ
ಎ.ಜಿ.ಬಿ. ಕಾಲೇಜ್, ವನಿತಾ ಸಮಾಜದ ಎದುರು, ದಾವಣಗೆರೆ ಇಲ್ಲಿ ನಡೆಯುವ

ಶ್ರೀ ಕನ್ನಿಕಾಪರಮೇಶ್ವರಿ ಕೋ- ಆಪ್. ಬ್ಯಾಂಕ್ ಲಿ., ದಾವಣಗೆರೆ
#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002

ಇದರ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಕೆಳಕಂಡ ನಾವು 13 ಜನ ನಿರ್ದೇಶಕರುಗಳು ಸ್ಪರ್ಧಿಸುತ್ತಿದ್ದೇವೆ.
11 ಮತಗಳನ್ನು ಸಾಮಾನ್ಯ ಸ್ಥಾನದ ಅಭ್ಯರ್ಥಿಗಳಿಗೆ ಹಾಗೂ
2 ಮತಗಳನ್ನು ಮಹಿಳಾ ಮೀಸಲು ಸ್ಥಾನದ ಅಭ್ಯರ್ಥಿಗಳಿಗೆ
ತಮ್ಮ ಅಭಿಮಾನದ ಅಮೂಲ್ಯವಾದ ಮತಗಳನ್ನು ನೀಡುವುದರ ಮೂಲಕ ಅತ್ಯಂತ ಬಹುಮತದಿಂದ ನಮ್ಮನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸಮಗ್ರ ಬೆಳವಣಿಗೆಗೆ ಆಶೀರ್ವದಿಸಬೇಕೆಂದು ಈ ಮೂಲಕ ಹೃದಯಪೂರ್ವಕವಾಗಿ ವಿನಂತಿಸುತ್ತೇವೆ.

ತಮ್ಮ ಸೇವಾಕಾಂಕ್ಷಿಗಳು

ಸಾಮಾನ್ಯ ಸ್ಥಾನಕ್ಕೆ

| ಕ್ರ ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ |
|---|---|---|
| 1 | ಅನಂತರಾಮ ಶೆಟ್ಟಿ ಕೆ.ಎನ್. | ಕ್ಯಾರೆಟ್ |
| 2 | ಕಾಶೀನಾಥ ಎನ್. | ಬ್ರೀಫ್ ಕೇಸ್ |
| 3 | ನಾಗಭೂಷಣ ಬಿ.ಪಿ. | ತೆಂಗಿನ ಕಾಯಿ |
| 4 | ಪ್ರಭಾಕರ ಆರ್.ಎಲ್. | ಹಣ್ಣುಗಳ ಬುಟ್ಟಿ |
| 6 | ಮಂಜುನಾಥ ಕೆ.ವಿ. | ಕ್ಯಾಲ್ಕುಲೇಟರ್ |
| 7 | ರವೀಂದ್ರ ಗುಪ್ತಾ ಜೆ. | ಕಪಾಟು |
| 9 | ಶಿವಾನಂದ ಜಿ.ಎಸ್. | ದ್ರಾಕ್ಷಿ |
| 10 | ಶ್ರೀನಿವಾಸಮೂರ್ತಿ ಆರ್.ಜಿ. | ಕಿರೀಟ |
| 11 | ಸತ್ಯನಾರಾಯಣಸ್ವಾಮಿ ಎ.ಎಸ್. | ಮೇಣದ ಬತ್ತಿ |
| 12 | ಸತೀಶ್ ಕೆ.ಎಸ್. | ಕಪ್ ಅಂಡ್ ಸಾಸರ್ |
| 13 | ಸತೀಶ್ ವೈ.ಬಿ. | ಬ್ಯಾಟ್ಸ್‌ಮನ್ |

ಮಹಿಳಾ ಮೀಸಲು ಸ್ಥಾನಕ್ಕೆ


| ಕ್ರ ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ |
|---|---|---|
| 1 | ಶ್ರೀಮತಿ ಗೀತಾ ಆರ್.ಬಿ. | ಲೇಡಿ ಪರ್ಸ್ |
| 4 | ಶ್ರೀಮತಿ ಸುಧಾ ನಾಗರಾಜ್ | ಉಂಗುರ |

ವಿಶೇಷ ಸೂಚನೆ:
ಬ್ಯಾಂಕಿನ ಗುರುತಿನ ಚೀಟಿ (Identity Card) ಯನ್ನು ತಪ್ಪದೇ ತರಬೇಕಾಗಿ ವಿನಂತಿ



ಜನ್ಮದಿನದ ಶುಭಾಶಯಗಳು



ಇಂದು (ದಿನಾಂಕ 4-1-2025)
ತಮ್ಮ ಸಾರ್ಥಕ ಜೀವನದ
49 ವಸಂತಗಳನ್ನು ಪೂರೈಸಿ,
50ನೇ ವಸಂತಕ್ಕೆ
ಪಾದಾರ್ಪಣೆ ಮಾಡುತ್ತಿರುವ
ನಮ್ಮೆಲ್ಲರ
ಆತ್ಮೀಯ ಸ್ನೇಹಿತನಾದ

ಶ್ರೀ ಕರಿಬಸಪ್ಪ ಎನ್.ಕೆ. (ಈರುಳ್ಳಿ)

ಅವರಿಗೆ ಜನ್ಮ ದಿನದ ಶುಭಾಶಯಗಳು. ಶ್ರೀಯುತರಿಗೆ
ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಪ್ರೇರಣಾ ಪರಿವಾರ

ಪ್ರೇರಣಾ ಯುವ ಸಂಸ್ಥೆ (ರಿ.) ದಾವಣಗೆರೆ.


KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas